Registered No. M. 1393

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೩ ಮಂಗಳೂರು, ೧೯೪೨ನೇ ಇಸವಿ ಮಾರ್ಚಿ ತಾರೀಕು ೨೪ನೇ ಮಂಗಳವಾರ, ಸಂಚಿಕೆ

VOL. XXIII MANGALORE, TUESDAY, MARCH 24, 1942 NO.

ಸರ್ ಸ್ಟಾಫರ್ಡ್ ಕ್ರಿಪ್ಸ್‌ರಿಗೆ ಸುಸ್ವಾಗತ

ನಮಗಾಗಲೀ ಯಾವ [illegible]
ವೆಂಬುದು ಖಂಡಿತವಾಗಿರುವಾಗ
ಕ್ರಿಪ್ಸ್‌ರು ಅದನ್ನು ಮು

ಸರ್ ಸ್ಟಾಫರ್ಡ್ ಕ್ರಿಪ್ಸ್‌ರು, ಭಾರತದ ರಾಯಭಾರಿಗಳಾಗಿ ಇಲ್ಲಿಗೆ ಹೊರಟಿದ್ದಾರೆ; ಇನ್ನೇನು, ಬೇಗನೇಇಲ್ಲಿಗೆ ತಲಪುತ್ತಾರೆ. ಬ್ರಿಟಿಷ್ ರಾಜನೀತಿಜ್ಞರಲ್ಲಿ ಬಹು ಪ್ರವೀಣರೆನ್ನಿಸಿದ ಇವರೇ, ಈ ದೊಡ್ಡ ಕೆಲಸವನ್ನು ವಹಿಸಿಕೊಂಡು ಇಲ್ಲಿಗೆ ದಯೆಮಾಡಿಸಲೊಪ್ಪಿರುವುದು, ಇಂಡಿಯಾ—ಬ್ರಿಟನುಗಳ ಭಾಗ್ಯೋದಯವೆನ್ನಬೇಕು.

ಸರ್ ಕ್ರಿಪ್ಸ್‌ರಿಗೆ ಭಾರತದ ರಾಜಕೀಯವಾದ ಕಗ್ಗಂಟನ್ನು ಬಿಡಿಸಲು ಸ್ವತಂತ್ರಾಧಿಕಾರವನ್ನು ಕೊಡಲಾಗಿದೆ ಎಂಬ ಮಾತಿದೆ. ಇದೆಷ್ಟು ಮಟ್ಟಿಗೆ ಆಧಾರಯುಕ್ತವೋ ತಿಳಿಯದು. ಆದರೆ ಇದರೊಂದಿಗೇ ಒಂದು ಅಧಿಕಾರವಾಣಿಯ ಪ್ರಕಟಣೆ ಹೊರಟಿರುವುದನ್ನೂ, ನಾವು ಗಮನಿಸದಿರಲಾಗುವುದು. ಅದರಲ್ಲಿ ಹೊಮಿನಿಯನ್ ಸ್ಥಾಪನೆಯ ಮಾತಿದೆ; ಬ್ರಿಟನ್ ಮತ್ತು ಇತರ [illegible]ನಿಯಗಳೊಡನೆ ಭಾರತಕ್ಕೆ [illegible]ನತೆ ದೊರಕುವ ಪ್ರಸ್ತಾವವಿದೆ; [illegible] ನಡುವೆ, ಇಂಡಿಯದ ಸಾರ್ವ[illegible] ಜೀವನದ ಪ್ರಧಾನ ಪಂಗಡಗಳಿಗೆ ಒಪ್ಪಿಗೆಯಾಗುವ ರೀತಿಯಲ್ಲಿ, ಇಂಡಿಯದವರ [illegible]ಳ್ಳೊಳಗೊಂದು ರಾಜಿಯ ತೀರ್ಮಾನ ಮಾಡಿಕೊಂಡು, ಮುಂದೆ ಅವರೇ ಭಾರತ ರಾಜ್ಯಘಟನೆಯನ್ನೂ ಹೊಸೆಯಲೆಂದೂ ಹೇಳಲಾಗಿದೆ. ಇದಿಷ್ಟನ್ನೂನೋಡಿಕೊಂಡು, ಸರ್ ಕ್ರಿಪ್ಸ್‌ರು ಭಾರತದ ರಾಜಕೀಯವಾದ ಕಗ್ಗಂಟನ್ನು ಬಿಡಿಸಲು ಶಕ್ತರಾದರೆ, ಅದು ನಮ್ಮ ಪುಣ್ಯವೇ ಎನ್ನಿ.

ಸರ್ ಕ್ರಿಪ್ಸ್‌ರಿಗೆ ಅಂತರ ಜನಾಂಗಗಳ ನುಂಡಲದಲ್ಲಿ ಸಾಳ್ಳೇ ಗೌರವವಿದೆ; ಅವರ ಬ್ರಿಟಿಶ್ ಸ್ನೇಹಕಾರದ ಕುರಿತಾದ ಟೀಕೆಗಳು ನೆಪ್ಪಿಕೆಗೆ ಪಾತ್ರವಾಗಿವೆ; ಇಂಡಿಯದ ಸಮಸ್ಯೆಯನ್ನು ಹೊಸ ಮಾರ್ಗದಿಂದ ಪರಿಹರಿಸಬೇಕೆನ್ನುವವರಲ್ಲಿ ಅವರು ಅಗ್ರಗಣ್ಯರು. ಆದರೂ

ಮೂರ್‌ಲ್ಯಾಂಡ್ ಇಗರ್ಜಿಯ ಬಳಿ ಬ್ರಿಟಿಶ್ ಟ್ಯಾಂಕುಗಳು.

ಯಾವ ಅಪಾಯ ಭೀತಿಯೂ ಇಲ್ಲದಂತೆ ದೇವಾರಾಧನೆ ನಡೆಸಲಿಕ್ಕೂ, ನಿತ್ಯಜೀವನ ಸಾಗಿಸಲಿಕ್ಕೂ ಅನುಕೂಲಿಸುವಂತೆ ಈ ಬ್ರಿಟಿಶ್ ಟ್ಯಾಂಕುಗಳು ಈ ಅನುಕೂಲ ಪ್ರದೇಶದಲ್ಲಿ ಮೂರ್‌ಲ್ಯಾಂಡಿನ ಒಂದು ಇಗರ್ಜಿಯ ಬಳಿಯಲ್ಲಿ ಗುಂಪು ಕೂಡಿವೆ.

ಆ "ಅಧಿಕಾರವಾಣಿಯ ಪ್ರಕಟಣೆ"ಯು, ಭಾರತದಲ್ಲಿ ಯಾವುದಾದರೂ ರಾಜ್ಯ ಘಟನೆಯ ದೊಡ್ಡ ಬಡಲಾವಣೆಗಳಾಗುವಲ್ಲಿ, ಅದನ್ನು ರದ್ದು ಮಾಡುವಂತೆ, ಮೈನಾರಿಟಿಗಳಿಗೆ ಪ್ರೋತ್ಸಾಹ ಕೊಡುವ ಈ ಸ್ವಾರಸ್ಯವೇನು? ಶತ್ರುವು ಭಾರತದ ಬಾಗಿಲನ್ನು ತಟ್ಟುತ್ತಿರುವಾಗ, ಈ ಮಾನ್ಯ ಗೃಹಸ್ಥರು ಕೈಕೊಂಡ ಈ ಘನವಾದ ಕಾರ್ಯದ ನ್ಯವಸ್ಥೆಯು ಅಷ್ಟೇ ಇರಬಹುದೆಂದು ಜನಗಳು ತಿಳಿಯುವಂತಾದುದು ಶೋಚನೀಯವಲ್ಲವೇ? ಸ್ವಾತಂತ್ರ್ಯ ಮತ್ತು ಡೆಮೊಕ್ರಸಿಯ ರಕ್ಷಣೆಗಾಗಿ, ಭಾರತ ಬ್ರಿಟನುಗಳ ಏಕೀಕರಣಕ್ಕಾಗಿ ಇದಕ್ಕಿಂತಲೂ ಸ್ಪಷ್ಟ ಮಾತಿನ ಧೋರಣೆಯ ಏರ್ಪಾಡುಗಳನ್ನು ಮಾಡಲು ಬ್ರಿಟಿಶ್ ಮುಂದಾಳುಗಳಿಗೆ ಸಾಧ್ಯವಿರಲಿಲ್ಲವೇ? ಮಾತು ಮಾತಿಗೆ ಇನ್ನೂ "ವೈಸರಾಯರ ಆ ಅಗೋಸ್ತು ಪ್ರಕಟಣೆ"ಯ ಮಂತ್ರವನ್ನೇ ಬಿಡದೆ, ನಮ್ಮ ಕವಿಯ ಬುಡದಲ್ಲಿ ತುಂಬು ತ್ತಿರುವುದೇಕೆ? ಯಾವ ಪ್ರಕಟಣೆಯು ತಿರಸ್ಕರಿಸಲ್ಪಟ್ಟಿದೆಯೋ ಅದರ ಹೊಗಳಿಕೆಯನ್ನು ಇನ್ನೂ ಇನ್ನೂ ಆಗಾಗ ಪ್ರಸ್ತಾವಿಸುವುದರಿಂದ, ಅವರಿಗಾಗಲೀ, ಹೊಸ ಉಪಾಯಗಳಿಂದಲೇ ಭಾರತದ ಸಮಸ್ಯೆಯನ್ನು ಪರಿಹರಿಸುವರೇ ಹೇಗೆಂದು ನೋಡೋಣ!

(೬ನೇ ಪುಟಕ್ಕೆ ಮುಂದುವರಿಸಿಯದೆ)

ದಿ ಕ್ರಿಸೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಇವರಿಗೆ ದಕ್ಷಿಣ ಕನ್ನಡಕ್ಕೆ ಆರ್ಗನೈಜರ್ಸ್ ಬೇಕಾಗಿದ್ದಾರೆ. ಈ ವಿಮಾ ಕಂಪೆನಿಯ ಸುಪರಿಂಟೆಂಡೆಂಟರು ಈ ಜಿಲ್ಲೆಯನ್ನು ಎಪ್ರಿಲ್ ತಿಂಗಳ ಪ್ರಥಮ ವಾರದಲ್ಲಿ ಸಂದರ್ಶಿಸಲಿರುವರು. ಪ್ರಾತಿನಿಧ್ಯ ವಹಿಸಲಿಚ್ಛಿಸುವವರನ್ನು ಅವರ ಸ್ಥಳದಲ್ಲೇ ಸಂದರ್ಶಿಸಲಾದೀತು. ನಿಮ್ಮ ಹಿಂದಿನ ಅನುಭವ, ವಹಿವಾಟಿನ ಗೆರೂಪಿ ಮುಂತಾದುವನ್ನು ನಮೂದಿಸಿ ಕಂಪೆನಿಯ ಮುಖ್ಯ ಕಾರ್ಯಾಲಯಕ್ಕೆ ಬರಕೊಳ್ಳಿ:—

The Crescent Insurance Co. Ltd.,

(Estd. 1919)

FORT: BOMBAY.

cessful Year : : One More Proof of the Sustained

All Round Progress of the "POPULAR"

	1940	1941
Received	Rs. 7,19,650	**Rs. 9,12,500**
Completed	Rs. 6,44,175	**Rs. 7,51,850**
Assurance Fund	Rs. 1,95,355	**Rs. 2,30,955**
Investments	Rs. 1,70,000	**Rs. 2,01,000**

uction in Over-all and Renewal Expense Ratios.

Interest Yield at 4% net.

Increased Premium Income

POPULAR INSURANCE COMPANY, LIMITED,

Head Office: MANGALORE, S. India.

Pandit Bank,
MANGALORE.

ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬಲಿಟಿಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಈ ಕೆಳಗಿನ ಬಡ್ಡಿ ದರಗಳಲ್ಲಿ ಎಡ್ವಾನ್ಸ್ ಮಾಡೋಣಾಗುತ್ತದೆ.

ರೂ. 50ರ ತನಕ ಸೇ. 8%
ರೂ. 51ರಿಂದ ರೂ. 500ರ ತನಕ ಸೇ. 7%
ರೂ. 501ರಿಂದ ಮೇಲ್ಪಟ್ಟು ಸೇ. 6½%
ಬಡ್ಡಿ ದರವನ್ನು ಈ ತಿಂಗಳ ಮೊದಲ್ಗೊಂಡು ತಬ್ದಿಲು ಮಾಡಿದೆ.—

ಚಾಲ್ತಿ ಠೇವಣಾತಿ:
ಪ್ರತಿದಿನದ ಶಿಲ್ಕಿನ ಮೇಲೆ ಸೇ. 1 %
ಸೇವಿಂಗ್ಸ್ ಬ್ಯಾಂಕ್: ಸೇ. 3 %

ನಿರಖು ಠೇವಣಾತಿ:
6 ತಿಂಗಳುಗಳಿಗೆ ಸೇ. 3½ %
1 ವರ್ಷಕ್ಕೆ ಸೇ. 4 %

PANDIT SHIVA RAO, B.A., LL.B.
PROPRIETOR.
PANDIT SANJIVA RAO, B.A.
AGENT.

AYA LAXMI BANK, LTD., MANGALORE.
ಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.
(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ, ಕಣ್ಣಾನೂರು, ಕಲ್ಲಿಕೋಟೆ, ಕುಂಡೊಟ್ಟ, ಮಾಲಾಪ್ಪುರಂ, ಮಂಗಳೂರು ಮತ್ತು ಮಂಜೇಶ್ವರ.

ಅಧಿಕೃತ ಮೂಲಧನ . . .	ರೂ. 5,00,000
ಅರ್ಪಿಸಲಾದ ಮೂಲಧನ . . .	ರೂ. 2,50,000
ಚೆಂದಾಹಾಕಿದ ಮೂಲಧನ . .	ರೂ. 1,82,000
ತೆತ್ತ ಮೂಲಧನ	ರೂ. 1,75,385
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,20,753

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ ಸೇ. 2½%; 6 ತಿಂಗಳ ಠೇವಣಾತಿಗಳಿಗೆ—ಸೇ. 3%;
12 ತಿಂಗಳ ಠೇವಣಾತಿಗಳಿಗೆ—3½%. 24 ತಿಂಗಳ ಠೇವಣಾತಿಗಳಿಗೆ – 4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಬಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

U. Shanker Bhat
ಸೆಕ್ರೆಟರಿ

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನಿಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—2—0 ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ.—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ೧ಕ್ಕೆ ರೂ. 3—0—0 ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯುಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ್ಧ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಪ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೋ ದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗು ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ
ಆಯುರ್ವೇದ ಭೂಷ
ಮಂಗಳೂರು, ದ. ಕ

(ರಿಜಿಸ್ಟರ್ಡ್)

ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ; ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ: 0–12–0, ಟ. ಖ. 0–9–0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ:—

ಯಂ. ವಿ. ಪ್ರಸಾದಿಕೆ ಔಷಧಾಲಯ,
ಶಿವಮೊಗ್ಗಾ.(ಮೈಸೂರು ಸೀಮೆ)

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಜಡುರಂಗ ಆಡುವವರೆ? ನೀವು ಯಾರಾದರೂ ಸರಿ–ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿ ಬರುವುದು. **ಬೆಲೆ ಬುಡ್ಡಿ ಒಂದಕ್ಕೆ ನಾಲ್ಕಾಣೆ** (ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ಕಳೆದ ವಾರ

ಮಲಯ ಮತ್ತು ಬರ್ಮಗಳ

ಕಡೆಯಿಂದ ಒಕ್ಕಲು ತೆಗೆದು ನಿರಾಶ್ರಿತರಾಗಿರುವ ಮಂದಿಯನ್ನು, ಪ್ರಭುತ್ವದವರು ಹೇಗೆ ನಡೆಸುವರೆಂಬ ವಿಚಾರದಲ್ಲಿ, ಪಂಡಿತ ನೆಹರುಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರಲ್ಲಿ ಅವರು, ಯುರೋಪಿಯರಿಗೂ, ಹಿಂದೀಯರಿಗೂ ಯಾವ ರೀತಿಯ ಭೇದಬುದ್ಧಿಯ ನಡವಳಿಕೆಯನ್ನು ಸ್ಪಷ್ಟವಾಗಿ ತೋರಿಸಲಾಗಿದೆ ಎಂದು ವಿವರಿಸಿದ್ದಾರೆ. ಬರ್ಮದಿಂದ ಇಂಡಿಯಕ್ಕೆ ಬರುವಾಗ, ಈ ಜನಗಳಿಗೆ ಎಂತಹ ಭಯೋತ್ಪಾದಕ ಘಟನೆಗಳು ಕಾದಿದ್ದವೆಂದೂ, ಬರ್ಮಾ, ಸಿಂಗಪುರ, ಪಿನೆಂಗ್‌ನ ಹಿಂದೀಯರಿಗೆ ಏನೇನು ಸಂಭವಿಸಿತೆಂದೂ, ಭಾರತದ ನಾನಾ ಭಾಗಗಳಲ್ಲಿ ಇವರಿಗೆ ಈಗ ಏನೇನು ಸಂಭವಿಸುತ್ತಿದೆ, ಅವರಿಗೆ ಅಲ್ಲೆಲ್ಲ ಆಶ್ರಯಸ್ಥಾನಗಳು ಒದಗಿಸಿಕೊಡುವ ರೀತಿ ಹೇಗಿದೆ ಎಂದೂ ಪಂಡಿತರು ತಿಳಿಸಿದ್ದಾರೆ. ಯುರೋಪಿಯರಿಗೆ ಮೋಜಿನ ವಸತಿಗಳನ್ನು ಒದಗಿಸುತ್ತಿರುವಾಗ, ಗತಿಗೋತ್ರ ಕಾಣದ ಹಿಂದೀಯರ ವಿಷಯದಲ್ಲಿ, ಕೆಲವು ಖಾಸಿಗೆ ಏಜನ್ಸಿಗಳಲ್ಲದೆ, ಬೇರೆ ಯಾರೂ ಕೇಳುವವರಿಲ್ಲವೆಂದು ಪಂಡಿತರ ದೂರು. ವರ್ಣವ್ಯತ್ಯಾಸದ ಈ ನಡವಳಿಕೆಯ ಆರೋಪಗಳ ಕುರಿತು, ಯಾವ ಅಧಿಕಾರಿಗಳೂ ಯಾವ ಸಮಾಧಾನವನ್ನೂ ಇನ್ನೂಹೇಳಿಲ್ಲ. ಅದೇಕೆಂದು ತಿಳಿದಿಲ್ಲ.

* * * *

ವಾರ್ಧಾದಲ್ಲಿನ ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಅಧಿವೇಶನ ಮುಗಿಯಿತು. ಇದಿಷ್ಟು ಬೇಗನೇ ಮುಗಿಯಲು, ಒಂದು ಮುಖ್ಯ ಕಾರಣವು, ಸರ್ ಕ್ರಿಪ್ಸ್‌ರು ಭಾರತಕ್ಕೆ ಬಂದ ಬಳಿಕ, ಸರಕಾರದ ಯಾವ ಸೂಚನೆಗಳನ್ನು ಅವರು ತರುವರೆಂದು ನೋಡಿಕೊಂಡು, ಮತ್ತೆ ಅಗತ್ಯಬಿದ್ದರೆ, ಈ ಕಮಿಟಿಯ ವಿೂಟಿಂಗನ್ನು ಡಿಲ್ಲಿಯಲ್ಲಿಯೋ, ವಾರ್ಧಾದಲ್ಲಿಯೋ ನೆರೆಯಿಸೋಣವೆಂಬುದೇ. ಸಧ್ಯ ಮಲಯಾ, ಸಿಂಗಪುರ, ಬರ್ಮಗಳ ನಿರಾಶ್ರಿತರ ಅನಸ್ಥೆಯ ವಿಚಾರದಲ್ಲಿ ಪಂಡಿತ ನೆಹರುಗಳ ಹೇಳಿಕೆಯನ್ನು ಕೇಳಿದ ಮೇಲೆ ಈ ವಿಷಯದಲ್ಲಿ ರಾಷ್ಟ್ರಪತಿ ಮೌಲಾನರೂ, ಗಾಂಧಿಜಿಯವರೂ ಬರೆಯುವರೆಂದು ಹೇಳಲಾಗಿದೆ. ಅಲ್ಲದೆ ಧ್ವಂಸನೀತಿಯನ್ನು ಅನುಸರಿಸಲಾಗುವ ಕಡೆ, ಶತ್ರುಗಳು ಇಳಿಯುವ ಕಡೆ, ಜನರೂ, ಕಾಂಗ್ರೆಸ್ ಮಂದಿಯೂ ಏನು ಮಾಡಬೇಕೆಂಬ ಕುರಿತು, ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಸೂಚನೆಗಳನ್ನು ಕಳುಹಿಸಲಾಗುವುದೆಂದೂ ತಿಳಿದು ಬಂದಿದೆ.

* * * *

ಡಾ. ಮೂಂಜೆಯವರು—

ಮುಸ್ಲಿಂ ಲೀಗಿನ ಕುರಿತು ಮಿ. ಅಮೆರಿಯವರು ಕೊಟ್ಟ ಹೇಳಿಕೆಯನ್ನು ಖಂಡಿಸಿ, ಒಂದು ಚಿಕ್ಕ ಲೇಖ ಬರೆದಿದ್ದಾರೆ. "ಮುಸ್ಲಿಂ ಲೀಗಿನ ಹೊರತಾಗಿ, ಮುಸ್ಲಿಮರಲ್ಲಿ ಷೀಯಾ ಸಂಘ, ಮೊಮಿನ್ ಸಂಘ, ಜಮೈತ್-ಉಲ್-ಉಲ್ಮೆಲ ಮೊದಲಾದ ಇತರ ಸಂಘಗಳಿವೆ ಎಂಬುದನ್ನು, ಮಿ. ಅಮೆರಿಯವರೂ ಒಪ್ಪಲೇ ಬೇಕು. ಇವೆಲ್ಲವೂ ತಾವೇ 'ಭಾರತದ ಮುಸ್ಲಿಮರ ಪ್ರತಿನಿಧಿಗಳೆಂದು ಹಕ್ಕು ಸ್ಥಾಪಿಸುವುವಾದರೂ, ಮುಸ್ಲಿಂ ಲೀಗ್, ಸರಕಾರದ ಕೃಪೆ ಆಶ್ರಯಗಳಿಗೆ, — ಇಂಪೀರಿಯಲ್ ಉದ್ದೇಶಗಳ ಕಾರಣದಿಂದ—ಪಾತ್ರವಾಗಿರುವುದರಿಂದ, ಆ ಲೀಗ್ ಸಂಸ್ಥೆಯೇ, ಇತರ ಎಲ್ಲ ಮುಸ್ಲಿಂ ಸಂಸ್ಥೆಗಳಿಗಿಂತ ಬಲಾಢ್ಯ ಸಂಸ್ಥೆಯೆಂದು ತೋರುವಂತೆ ಮಾಪರ್ಡಿ ಸಲ್ಪಟ್ಟಿದೆ ಮಿ. ಅಮೆರಿಯವರೆನ್ನುವಂತೆ, ಮುಸ್ಲಿಂ ಲೀಗ್ ಮಾತ್ರವೇ, ಮುಸ್ಲಿಮರ ರಾಜಕೀಯಾಭಿಪ್ರಾಯವನ್ನು ಪ್ರತಿಧ್ವನಿಸುವ ಒಂದು ಮುಖ್ಯ ಸಂಸ್ಥೆಯಾಗಿರುವುದು ನಿಜವಾದರೆ, ಮುಸ್ಲಿಂ ಮೆಜಾರಿಟಿ ಪ್ರಾಂತಗಳಾದ ಸಿಂಧ್, ಗಡಿನಾಡು, ಪಂಜಾಬ್, ಬಂಗಾಳಗಳಲ್ಲಿ —ಮಿ. ಜಿನ್ನರು ಇಷ್ಟು ಸೇಚಾಡಿಯೂ,— ಒಂದೇ ಒಂದು ಮುಸ್ಲಿಂ ಲೀಗಿನ ಮಂತ್ರಿ ಮಂಡಲವಷ್ಟಾದರೂ ಏಕೆ ಇಲ್ಲದೆ ಹೋಯಿತು? ತಾವೇ ಲಕ್ಷ ಕೋಟಿ ಪ್ರಜಾ ಸಂಖ್ಯೆಯವರೆಂಬ ಆ ಮೋಮಿನರು, ತಮಗೇ ಪ್ರತ್ಯೇಕವಾದ ಪ್ರಾತಿನಿಧ್ಯ ಕೊಡಿ ಎನ್ನುತ್ತಾರೆ; ಷೀಯಾ ಸಂಘದವರು, ಮುಸ್ಲಿಂ ಲೀಗಿನವರಂತೆ, ಪ್ರತ್ಯೇಕ ಮತದ ಅಪೇಕ್ಷೆಸದೆ, ಮಂಡಲವನ್ನೇ ಕೆ ವಲ್ಲಿ ಮುಸ್ಲಿಂ ಮುಸ್ಲಿಮರ ರಾಜಕೀಯ ಗಳನ್ನು ತಿಳಿಸುವ ಏಕವ್ಯಕ್ತಿ ಎಂದು, ಮಿ. ಅಮರಿಗಳು ಹೇಗೆ "ಸರ್ಟಿಫಿಕೆಟ್" ಕೊ ಎಂದಿದ್ದಾರೆ.

* *

"ಮತ್ತೆ ಸರ್ ಕ್ರಿಪ್ಸ್ ಭಾರತದ ರಾ

ಕಾರ್ಯಕ್ಕೆ ಅಡಚಣೆ ಮಾಡುವ ಯಾವ ಜರ್ಜೆಗಳಾಗಲೀ ಯೊಂದು ಬ್ರಿಟನಿನ ದಲ್ಲಿಯೂ ತಲೆ ಹಾ ರೊಂದಿಗೇ, "ಮುಸ್ಲಿಂ ಲೀಗ್ ಭಾರತ ಮುಸ್ಲಿಮರ ರಾಜಕೀ ಪ್ರಾಯಗಳನ್ನು ತಿಳಿಸಬಲ್ಲ ಸಂಸ್ಥೆ"ಯೆಂದೂ ಅಮರಿಯನ್ ಸರ್ಟಿಫಿಕೇಟ್ ಹೊರಟಿದೆ ವೇನು? ಇತರ ಮುಸ್ಲಿಂ ಸಕ್ತಿಗೆ ವಿರುದ್ಧವಾಗಿ, ಮುಸ್ಲಿಂ ಲೀಗ್ ಕೊಟ್ಟ ಈ ಸರ್ಟಿಫಿಕೆಟ್ ಕ್ರಿಪ್ಸರ ರಾಯಭಾರ ಕಾರ್ಯ ಯಾದೀತೆಂದೇ? ಅಥವಾ ಟೆ ತಟ್ಟಿ, ಅವರ ಆ ಎದ ಇಂಡಿಯದ ಜನಗಳಿಗೆ ನಿಜ

(ಒಂನೇ ಪುಟಕ್ಕೆ ಮುಂದುವರಿಸಿರಿ)

ಶತ್ರುವನ್ನು

ಭಾರತದಿಂದ

ದೂರವಿರಿಸಿ

ಗವರ್ನರರ ಯುದ್ಧ ನಿಧಿಗೆ

ಪುನಃ

ಧನ ಸಹಾಯಮಾಡಿ.

ಡಿಫೆನ್ಸ್ ಬಾಂಡುಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಹೆಚ್ಚು ಹೆಚ್ಚಾಗಿ ಕೊಂಡುಕೊಳ್ಳಿ.

ಚಂದಾ ಕೊಡಿ V

ವಿಜಯಕ್ಕಾಗಿ

V ಸಾಲ ಕೊಡಿ

Guaranteed For Purity,.

BEST CASTOR OIL

TASTELESS KP ODOURLESS.

ಶುದ್ಧಮಾಡಿದ ಹರಳೆಣ್ಣೆ ವಾರೆರಿಕೆ ರಹಿತ ಇಲ್ಲವೆಂದು ಡಾಕ್ಟರಗಳಿಂದ ಸರ್ಟಿಫೈಮಾಡಿದ್ದು

CASTOR OIL WORKS, COIMBATORE.

K.P. Cas Hair O

ಬಹಳ ತಂಪು, ಚೇ ದಾಯಕ, ಉತ್ತಮ ಮಳ, ಕೂದಲು ಬೆ ಸಲು ಸಹಾಯಕವಾಗಿ ತ್ತಿದೆ. ಕಾಂತಿ ಗೂಡಿ ಸುತ್ತದೆ. ಕೂದಲು ಬಾಚಿ ಅಣಿ ಮಾಡುವರೆ ನೆರವಾಗುತ್ತದೆ.

ಅತ್ಯುತ್ತಮವಾದ ಕೂದಲು ಶಕ್ತಿವರ್ಧಕ ಒಮ್ಮೆ ಪರೀಕ್ಷಿಸಿರಿ.

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc. You are cordially invited to utilize these facilities.

CANARA BANK, LIMITED.

ESTD: 1906.

...ನ ಯಕ್ಷಗಾನ ಸಭಾ

...ರದಲ್ಲಿನ ಅಭಾರಿ ತಾಳಮ
...ಡಿಕೊಂಡು ಬಂದಾರಭ್ಯ
...ನೆ ರಾಮಯ್ಯನವರಿಗೆ
...ಡುವುದೊಂದೇ ದಿನ
ತಾಳಮದ್ದಳೆ
...ತಲೆಯಲ್ಲಿ "ಗರಗರ"
...ತ್ತು. ತಾಳಮದ್ದಳೆಯಾಗಿ
...ಟ್ಟದ್ದು, ಅವರ ವರ್ಣನೆ
...ಮಂತನ ಬಾಲ
ಇತ್ತು.

...ಕೆಲವು ಮಂದಿ ಸೇರಿ
ಯಕ್ಷಗಾನ ಸಭೆ ಸ್ಥಾಪಿಸಿ
ಆಗಾಗ ತಾಳಮದ್ದಳೆ ಕೂಟ
...ಗುಗಿಸುವಂತೆ, ತಾವೂ ತಮ್ಮ
...ಏಕೆ ಮಾಡಬಾರದು?—
ರಾಮಯ್ಯನವರು ಯೋಚಿಸ
ವಿಚಾರವನ್ನು ತಮ್ಮ
...ನ್ನೇ...ಲ್ಲಿಯೂ ಹೇಳಿದರು.
"ಅದಕ್ಕೇನು ಅಡ್ಡಿ? ನಮ್ಮ
...ದೊಂದು ಸಭೆ ಇದ್ದರೆ
...ೇ" ಎಂದು ಒಪ್ಪಿಗೆ

ರಾಮಯ್ಯನವರಿಗೆ ಈಗ ಆ
...ಕ್ಕೊಂದು ಯಕ್ಷಗಾನ ಸಮಿತಿ
ಯನ್ನು ಸ್ಥಾಪಿಸುವ, ಅದಕ್ಕೆ ಮೆಂಬರು
ಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ
ಕ್ಷಣಕಾಲವೂ ಬಿಡುವಿಲ್ಲವಾಯಿತು.
ಅಂತೂ ಅವರು ಅನೇಕ ಮಂದಿ
ಮೆಂಬರರನ್ನು ಸೇರಿಸಿದರು. ಅವರಲ್ಲಿ
ಕೆಲವರ ವ್ಯಕ್ತಿಪರಿಚಯವು ಈ ರೀತಿ
ಯದಾಗಿತ್ತು.

ನಾರಣಪ್ಪ! ಈತ ಗಟ್ಟದ ಕೆಳಗಿ
ನಿಂದ ಇಲ್ಲಿಗೆ ಬಂದು, ಅಡಿಕೆ ತೋಟ
ಮಾಡಿಕೊಂಡಿರುವವನು. ಈತನಿಗೆ
ಕೆಲವು ಪ್ರಸಂಗಗಳ ಕೆಲವು "ಚಿಲ್ಲರೆ"
ಪಾತ್ರಗಳ ಅರ್ಥ ಹೇಳುವುದಕ್ಕೆ ಬರು
ತ್ತಿತ್ತು. ಆದರೆ ಯಕ್ಷಗಾನದ ಅರ್ಥ
ಹೇಳುವಲ್ಲಿ ತನ್ನನ್ನು ಬಿಟ್ಟರಿಲ್ಲವೆಂಬ
ಅಹಂಕಾರ ಇವನ ತಲೆಯಲ್ಲಿ ಸದಾ
ಓಡಾಡುತ್ತಿತ್ತು.

ನರಸಪ್ಪಯ್ಯನೆಂದರೆ, ಆ ಗ್ರಾಮದ
ಶ್ಯಾನುಭಾಗರು. ಅವರಿಗೆ ಅರ್ಥ
ಹೇಳುವ ಅಭ್ಯಾಸವಿಲ್ಲವಾದರೂ, ಯಾವ
ಪದಕ್ಕೂ, ಯಾವ ಪ್ರಸಂಗಕ್ಕೂ ಅರ್ಥ
ಹೇಳುವಷ್ಟು ವಾಚ್ಛಾತುರ್ಯ ತನ್ನಲ್ಲಿದೆ
ಎಂಬ ತಿಳುವಳಿಕೆ ಇವರದು. ವಾದದಲ್ಲಿ
ಎಂಥವನನ್ನೂ ಬಾಯಿ ಕಟ್ಟಿಸಿಯೇ
ನೆಂಬ ಧೈರ್ಯ ಇವರಿಗೆ. ಇವರು
ಇದುವರೆಗೆ ಎಲ್ಲಿಯೂ ಅರ್ಥ ಹೇಳಿದು
ದನ್ನು ಕೇಳಿದವರಿಲ್ಲ. ಎಲ್ಲ ಅರ್ಥಗಾರ
ರನ್ನು ಟೀಕಿಸಿ ಇವರು ಮಾತಾಡಿದು
ದನ್ನು ಗ್ರಾಮದಲ್ಲಿ ಹಲವರು, ಹಲವು
ಬಾರಿ, ಕೇಳಿದುದುಂಟು.

ಅಂಗಡಿ ಪುಟ್ಟನೆಂದರೆ, ಅವನು
ಯಕ್ಷಗಾನದ ಒಬ್ಬ "ಪಂಡಿತ"ನೇ.
ಅವನು ಚಿಕ್ಕಂದಿನಲ್ಲಿ ದಶಾವತಾರದ
ಮೇಳಗಳಲ್ಲಿ, ಕೆಲವು ಕಾಲ, ವೇಷ ಕಟ್ಟಿ
ಕುಣಿದವನೆಂದು ಅವನ ಹೇಳಿಕೆ.
ಅವನು ಪದಗಳಿಗೆ ಉದ್ದುದ್ದ ಅರ್ಥ
ಹೇಳುವವರನ್ನು "ಅಧಿಕ ಪ್ರಸಂಗಿ"ಗಳು
ಎನ್ನುತ್ತಿದ್ದ. ಅವನಿಗೆ ಹೊಸ ರೀತಿಯ
ಅರ್ಥಗಾರರನ್ನು ಕಂಡರೆ ಆಗದು.
ಪ್ರಸಂಗದ ಅರ್ಥವೆಂದರೆ "ಸಾರ್ವ
ಜನಿಕ ಭಾಷಣ"ವಲ್ಲ; ಸುಮ್ಮನೆ ಶಬ್ದ
ಗಳನ್ನು "ಬಡ ಬಡ" ಆಡಿದ ಮಾತ್ರಕ್ಕೆ,
ಅದು ಯಕ್ಷಗಾನದ ಅರ್ಥವಾಗುವು
ದಿಲ್ಲ; ಪದಕ್ಕೆ ತಕ್ಕ ಮಾತು, ಮಾತಿಗೆ
ತಕ್ಕ ರಸಭಾವ ಇದರ ಗುಟ್ಟು, ದಶಾವ
ತಾರದ ವೇಷ ಕಟ್ಟುವವರಿಗಲ್ಲದೆ, ಬೇರೆ
ತಾಳಮದ್ದಳೆಯ ಅರ್ಥಗಾರರಿಗೆ
ಎಂದಿಗೂ ತಿಳಿಯದು ಎಂದು ಅವನ
ಅಭಿಪ್ರಾಯ.

ಜಗನ್ನಾಥಯ್ಯ ಆ ಗ್ರಾಮದ ಒಬ್ಬ
ದೊಡ್ಡ ಜಮೀನುದಾರರು. ಇವರು ಕನ್ನ
ಡದ ಒಂದೆರಡು ಸುಲಭ ಕಾವ್ಯಗಳ ಕೆಲವು
ಪುಟಗಳನ್ನು ನೋಡಿದ್ದರು; ಸಂಸ್ಕೃತ
ಶಬ್ದ ಕೆಲವು, ಶ್ಲೋಕ ಕೆಲವು ಇವರ
ಲ್ಲಿತ್ತು. ಆದರೆ ಇವರು ಆ ಕಾವ್ಯದ
ಶಬ್ದಗಳನ್ನು ಉಪಯೋಗಿಸುವಾಗ, ಆ
ಶ್ಲೋಕಗಳನ್ನು ಉಚ್ಚರಿಸುವಾಗ ಕಿವಿ
ಮುಚ್ಚಿಕೊಂಡು ಗಂಗಾ ಸ್ನಾನ ಮಾಡ
ಬೇಕು. ಅಂದರೆ ಆ ಕಾವ್ಯಶಬ್ದಗಳಿಗೂ,
ಆ ಸಂಸ್ಕೃತ ಶ್ಲೋಕಗಳಿಗೂ ಆಗ
ಇವರ ಬಾಯಲ್ಲಿ ಪುನರ್ ಜನ್ಮವಾಗು
ತ್ತಿತ್ತು. ಇವರು ಒಳ್ಳೇ ಅರ್ಥಗಾರರಿರುವ
ಯಕ್ಷಗಾನ ಕೂಟದಲ್ಲಿ ಅರ್ಥ ಹೇಳಲು
ಒಪ್ಪರು. ಮುಖ್ಯಿಸಾತ್ರ ತಮಗೇ ಕೊಡ
ಬೇಕೆಂಬ ಈ ಷರತ್ತಿನ ಮೇಲೆ ಮಾತ್ರ,
ಅವರು ಅರ್ಥ ಹೇಳಲು ಒಪ್ಪುತ್ತಿದ್ದರು.
ಇವರ ಅರ್ಥವೆಂದರೆ ಮೂರು ಪೈಲು
ಉದ್ದದ ಒಂದೇ ವಾಕ್ಯ. ಆದರಲ್ಲಿ ಅರ್ಥ
ವಿರಾಮ, ಪೂರ್ಣವಿರಾಮಗಳಿಲ್ಲ. ಪ್ರಸಂ
ಗದ ಪೂರ್ಣ ಅರ್ಥವಿಲ್ಲ. ಕರ್ತೃ, ಕ್ರಿಯೆ
ಮೊದಲಾದ ವ್ಯಾಕರಣ ನಿಬಂಧನೆಗಳು
ಇವರನ್ನು ಬಾಧಿಸುತ್ತಿರಲ್ಲಿಲ್ಲ. ಇವರು
ಅರ್ಥ ಹೇಳಲು ಬರುವಾಗ, ತಮ್ಮ
ಕಡೆಯ ಕೆಲವರನ್ನು, ಜತೆಯಲ್ಲಿ ಕರೆದು
ಕೊಂಡು ಬಂದು, ತಮ್ಮ ಅರ್ಥ ನಿಂತೊ
ಡನೆ, ಅವರೆಲ್ಲ ಆಗಾಗ ಚಪ್ಪಾಳೆ ಹೊಡೆ
ಯುವಂತೆ ಏರ್ಪಡಿಸಿಕೊಳ್ಳುವ ಅಭ್ಯಾಸ
ಇವರಲ್ಲಿತ್ತು. ತಾಳಮದ್ದಳೆ ಸಪ್ಪೆ
ಯಾಯಿತೆಂದು, ಯಾರಾದರೂ ಮರು
ದಿನ ಇವರಿಗೆ ತಿಳಿಸಿದರೆ, ಎದುರುಗಡೆ
ಅರ್ಥ ಹೇಳುವವರು ಸರಿಯಾಗಿರಲಿಲ್ಲ
ವೆಂಬ ಸಮಾಧಾನದ ಉತ್ತರ ಯಾವಾ
ಗಲೂ ಇವರಲ್ಲಿ ತಯಾರಿರುತ್ತಿತ್ತು.

ಇಂಥವರೇ ಕೆಲವರು ಈ ಯಕ್ಷ
ಗಾನ ಸಭೆಯ ಸದಸ್ಯರು!

* * * *

ಇಂದು ಗ್ರಾಮ...ಶಾಲೆಯಲ್ಲಿ ಈ
ಸಭೆಯ ಪ್ರಥಮ ಮೀಟಿಂಗ್; ಮೆಂಬರ

(ಗಂನೇ ಪುಟಕ್ಕೆ ಮುಂದುವರಿಸಿಯದೆ)

10
...ದುಗಳನ್ನು
ಅಥವಾ



2 ಬಿಲ್ಲೆಗಳನ್ನು ತೆಗೆದುಕೊಳ್ಳಿ.

ನೀವು ಅತೀ ನಿಶ್ಶಕ್ತರಾದಂತೆ
ತೋರಿದಾಗ,

ಫೊಸ್ಫೆರಿನ್

ನಿಮ್ಮಲ್ಲಿ ಚೈತನ್ಯ ತುಂಬುತ್ತದೆ.

ನಿಜಕ್ಕೂ ಇದು
ಅತ್ಯುತ್ತಮ ಶಕ್ತಿವರ್ಧಕ; ಮತ್ತಿದು
ನೀವು ಬಳಸಿ ಕಳಕೊಂಡ
ಬಲ, ಕ್ರಿಯಾಶಕ್ತಿ ಮತ್ತು ಚೇತನ
ಇವನ್ನು
ಪುನಃ ಒದಗಿಸಿಕೊಡುತ್ತದೆ.

PHOSFERINE

ನರಗಳ ದೌರ್ಬಲ್ಯದಿಂದುಂಟಾಗುವ
ಯಾವತ್ತೂ ನಿಶ್ಶಕ್ತಿಗೆ.

ಮ್ಹಾಲಿಕರು:—
ಫೊಸ್ಫೆರಿನ್ (ಆಶ್ಟನ್ & ಪಾರ್ಸನ್ಸ್)
ಲಿಮಿಟೆಡ್,
...ಟ್ಫರ್ಡ್, ಇಂಗ್ಲಾಂಡ್.

ನೀವು ಮಿತವ್ಯಯ ಮಾಡಬೇಕಾದರೆ
ಮೊದಲು
ನಿಮ್ಮ ಹಣದ ಭದ್ರತೆಯನ್ನು ನೋಡಿ!

Safety first!



ಸೆಕುಂಡಸ್ ನ್ಯೂ ಕೆಲಿಬರ್ ರೆಕ್ಟೆಂಗ್ಯುಲರ್

ನಿಕ್ಕೆಲ್ ಬೆಳ್ಳಿಯದು	ರೂ. 44
ಪೇಟೆಂಟ್ ಥಳಥಳಿಸುವ ಉಕ್ಕು	ರೂ. 52
ರೋಲ್ಡ್ ಗೋಲ್	ರೂ. 58
18-ಕೆ ಗಟ್ಟಿ ಭಂಗಾರ	ರೂ. 132



ಸೆಕುಂಡಸ್ ನ್ಯೂ ಕೆಲಿಬರ್ ಕರ್ವಡ್

ಪೇಟೆಂಟ್ ಥಳಥಳಿಸುವ ಉಕ್ಕು	ರೂ. 54
ರೋಲ್ಡ್ ಗೋಲ್ಡ್	ರೂ. 63
9-ಕೆ. ಗಟ್ಟಿ ಭಂಗಾರ	ರೂ. 110

ವಾಚುಗಳನ್ನು ಕೊಳ್ಳುವಾಗ ಅವುಗಳ ಉದ್ದಿಶ್ಯಕ್ಕಿಂತಲೂ ಬೆಲೆಯು ಏರಿಳಿತವು ವಿಚಾರಯೋಗ್ಯವಲ್ಲ. ಯಾಕೆಂದರೆ ನಂಬಲಸಾಧ್ಯವಾದ ಸಮಯಸೂಚಿಗೆ ತತ್ತ್ವ ಬೆಲೆಯು, ಎಷ್ಟೇ ಆದರೂ ಅದು ಪೂರ್ಣ ನಷ್ಟವೇ. ಮಿತವ್ಯಯವು ಅವಶ್ಯವಾದರೆ, ವಿನ್ಯಾಸದಿಂದ, ಕಡಿಮೆ ಬೆಲೆಗೆ ನಿಖರ ಕಾಲ ಸೂಚಿ ಎಂದು ಹೆಸರು ಪಡೆದ, ವೆಸ್ಟ್ ಎಂಡ್ "ಸೆಕುಂಡಸ್" ನಂಥ ಪ್ರಖ್ಯಾತ ವಾಚುಗಳನ್ನು ಕೊಳ್ಳಿರಿ. ಇವುಗಳಲ್ಲಿ ನಿಮ್ಮ ಹಣದ ಭದ್ರತೆಯೂ, ಉಪಯುಕ್ತತೆಯ ನಿಶ್ಚಯವೂ ಇವೆ. ನಿಮಗೆ ತಕ್ಕುದಾದ "ಸೆಕುಂಡಸ್" ಮಾದರಿಯನ್ನು ಸಚಿತ್ರ ಉಚಿತ ಕೆಟಲಾಗಿನಿಂದ ಆರಿಸಿಕೊಳ್ಳಿ.

buy WEST END "SECUNDUS"
Economy Series Watches

ವೆಸ್ಟ್ ಎಂಡ್ ವಾಚ್ ಕಂಪೆನಿ,
ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co
BOMBAY CALCUTTA

ನಿಮ್ಮ ಶ್ವಾಸಕ್ಕೆ
ವಾಸನೆ ಇದ್ದರೆ ನೀವು
ಆರೋಗ್ಯವನ್ನು
ಅನುಭವಿಸಲಾರಿರಿ

"ಅನುನಿತ್ಯವೂ ನಮ್ಮ ಯಕೃತ್ತಿನಿಂದ ...ಂಟ್ ಪಿತ್ತದ ದ್ರವವು ಕರುಳಿಗೊಳ... ದ್ದರೆ ನಮ್ಮ ಚಲನಗಳು ಘಟ್ಟಿಯ... ಬದ್ಧತೆಯುಂಟಾಗುತ್ತದೆ ಮತ್ತು ನ... ರವು ಅನ್ಯಾಭಾವಿಕವಾಗಿ ನಮ್ಮ ಕರುಳುಗಳಲ್ಲಿ ಹಾಳಾಗುತ್ತದೆ. ಪ್ರತಿ ಆರು ನಿಮಿಷಗಳಿಗೊಮ್ಮೆ ನ...ಲ್ಲೆಲ್ಲಾ ವಿಷವನ್ನು ಕಳುಹಿಸು... ನಮ್ಮನ್ನು ಮ್ಲಾನಚಿತ್ತರನ್ನಾಗಿಯೂ ...ದವರನ್ನಾಗಿಯೂ ಯಾವುದಕ್ಕೂ ...ದವರನ್ನಾಗಿಯೂ ಮಾಡುತ್ತದೆ. ...ತ್ರರು ಈ ಹೊಲಸು ನಮ್ಮ ಬಾಯಿ... ಹೊರಡುವ ದನ್ನು ಅನುಭವಿಸಿ ಅದನ್ನೆ ದುರ್ವಾಸನೆ ಮಯವಾದ ಶ್ವಾಸವೆನ್ನುತ್ತಾರೆ. ಭೇದಿಯ ಮತ್ತು ಬಾಯಿ ಮುಕ್ಕಳಿಸುವ ಇತರ ಔಷಧಗಳು ಸ್ವಲ್ಪ ಮಟ್ಟಿಗೆ ಮಾತ್ರ ಸಹಾಯ ಮಾಡುವವು ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸಿ. ಅವುಗಳ ಎರಡು ಪೈಂಟ್ ಪಿತ್ತದ್ರವವು ಸರಾಗವಾಗಿ ಸುರಿಸುತ್ತವೆ. ಮತ್ತಾಗ ನೀವು 'ಇನ್ನೂ ಇನ್ನೂ' ಹುರುಪುಗೊಂಡವರಾಗುತ್ತೀರಿ. ಕಾರ್ಟರರ ಲಿಟ್ಲ್ ಲಿವರ್ ಪಿಲ್ಸ್ ಎಂಬ ಹೆಸರಿನಿಂದಲೇ ಕೇಳಿರಿ ಮತ್ತು ನೀವು ಕೇಳಿದುದನ್ನೇ ತೆಗೆದುಕೊಳ್ಳಿ.

ಪ್ರಪಂಚದ ಪಾನಿಪತ್ತು

ಅಲ್ಲಲ್ಲಿ ರಣ ಮೇಘಗಳು

ಬ್ರಿಟಿಶರ್ ರೋಡ್ಸ್‌ಗಿನ ಮೇಲೆ ದಾಳಿ ಮಾಡಿದ್ದಾದ್ಮೆ ಅಲ್ಲದೆ ಸೈಪ್ರಸ್ ಮತ್ತು ಸಿರಿಯಾಗಳ ಮೇಲೆ ಏಕ್ಸಿಸ್ ರಾಷ್ಟ್ರಗಳು ಆಕ್ರಮಣ ನಡೆಸದಂತೆ, ರೋಡ್ಸ್ ನಲ್ಲಿಯೂ, ಇತರ ಗ್ರೀಕ್ ದ್ವೀಪಗಳಲ್ಲಿಯೂ ಭರದಿಂದ ಸರ್ವಸಿದ್ಧತೆಗಳನ್ನೂ ಮಾಡಲಾಗುತ್ತಿದೆ. ಸೈಪ್ರಸ್, ರೋಡ್ಸ್‌ನಿಂದ ೩೦೦ ಮೈಲುಗಳ ದೂರದಲ್ಲಿದ್ದು ಅದರ ಒಂದು ಭಾಗ ಜರ್ಮನ್ ಸೇನೆಗಳಿಂದ ತುಂಬಿದೆ.

ಟರ್ಕಿ ಕರಾವಳಿಯ ಬಳಿ ನಡೆಯುತ್ತಿರುವ ಸಣ್ಣ ಪುಟ್ಟ ಕಾಳಗಗಳಿಂದ, ಯುದ್ಧ ಟರ್ಕಿಗೆ ಸವಿೂಪಿಸಿದೆ ಎಂದೆನ್ನಬಹುದು. ಜರ್ಮನರು ವಸಂತಋತುವಿನ ದಾಳಿಗಾಗಿ ಭಾರೀ ಸಿದ್ಧತೆ ಮಾಡುತ್ತಿರುವರೆಂದು ಅಂಕಾರದ ವಾರ್ತೆ.

ಜಪಾನರ ತೀವ್ರವಾದ ಮುನ್ನಡೆಯಿಂದ ಜರ್ಮನರಿಗೆ ಅಸಮಾಧಾನವಾಗಿದೆಯಂತೆ. ತೋರಿಕೆಯ ಮಟ್ಟಿಗೆ ಜರ್ಮನ್ ಸರಕಾರದ ಬಾಯಿ ಜಪಾನರ ವಿಜಯದ ಕುರಿತು ಸಂತೋಷ ಪ್ರಕಟಿಸಿದರೂ ಒಳಗಿಂದೊಳಗೆ ಜಪಾನರ ಈ ಕ್ಷಿಪ್ರ ವಿಜಯವು ಜರ್ಮನರ ಮನಸ್ಸನ್ನು ಕಲಕಿದೆ; ಜರ್ಮನರ ಮುಂದಿನ ಹಿತಾಸಕ್ತಿಗೆ ಅದರಿಂದ ತೊಂದರೆಯಾಗಬಹುದೆಂಬ ಭೀತಿ ಹುಟ್ಟಿದೆ ಎಂದು ಸುದ್ದಿ.

ಜಪಾನಿನದು ಸ್ವತಂತ್ರ ಧೋರಣ; ಜರ್ಮನಿಯ ಒತ್ತಾಯದಂತೆ ಜಪಾನು ರಷ್ಯದ ಮೇಲೆ ಬಿದ್ದೀತೆಂಬ ವಾದಕ್ಕೆ ಆಧಾರವಿಲ್ಲ ಎಂದು ಕೆಲವು ಪತ್ರಿಕೆಗಳ ಹೇಳಿಕೆ. ರಷ್ಯವನ್ನೇ ಆಕ್ರಮಿಸಬೇಕೆಂಬುದು ಜಪಾನಿನ ಕಾರ್ಯನೀತಿಯಾಗಿದ್ದರೆ, ಜಪಾನು ಕಳೆದ ದಶಂಬರದಲ್ಲಿ, ಅಮೆರಿಕದ ಮೇಲೆ ಬೀಳುವ ಬದಲಾಗಿ ರಷ್ಯದ ಮೇಲೆ ಬೀಳುತ್ತಿತ್ತು; ಆಗಿನ ಸಂದರ್ಭದಲ್ಲಿ ರಷ್ಯದವರು ಇನ್ನಷ್ಟು ಜೋರಿನಿಂದ ಜರ್ಮನಿಯ ಮೇಲೆ ಬೀಳುವುದನ್ನು ನೋಡಿಕೊಂಡ ವಿನಾ, ಜಪಾನರು ರಷ್ಯದವರ ಮೇಲೆ ಬೀಳರು ಎಂದು ಅವುಗಳ ಅಂದಾಜು. ಒಟ್ಟಿನಲ್ಲಿ ರಷ್ಯದವರು, ಒಂದು ವೇಳೆ, ಜಪಾನಿನ ಮಾತೃಭೂಮಿಯ ಮೇಲೆ ಬೀಳಬಹುದೆಂಬ ಈ ಭೀತಿಯೇ, ಜಪಾನರು ರಷ್ಯದ ಮೇಲೆ ಹಗೆತನ ಸಾಧಿಸುವ ಒಂದು ಕಾರಣವಾಗಿದೆ; ಮತ್ತೆ ಮಿತ್ರರು ಜರ್ಮನಿಯನ್ನು ಕೂಡಲೇ ಆಕ್ರಮಿಸಬೇಕೆನ್ನುವ ವಿು. ಲಿಟ್ವಿನೋವ್‌ರ ಈ ಸೂಚನೆಯಿಂದ, ಆ ಆಘಾತವು, ಒಂದಲ್ಲ ಒಂದು ರೀತಿಯಿಂದ ತಮ್ಮ ಮೇಲೆ ದುಷ್ಪರಿಣಾಮವನ್ನು ಉಂಟುಮಾಡಬಹುದೆಂಬ ಈ ಬೆದರಿಕೆಯೂ ಜಪಾನರಲ್ಲಿ ಹುಟ್ಟಿದೆ. ಕಾರಣ ಪಶ್ಚಿಮರಂಗದಲ್ಲಿ ಎರಡನೆಯ ಯುದ್ಧ ಕಳವೊಂದು ನಿರ್ಮಾಣವಾದರೆ, ಆಗ ರಷ್ಯದವರಿಗೆ ಪೂರ್ವ ರಂಗದಲ್ಲಿಯೂ ಒಂದು ಎರಡನೆಯ ಸಮರಾಂಗಣವನ್ನು ತೆರೆಯಲೂ ಅನುಕೂಲಿಸುವುದು.

ಜಪಾನಿನ ಸದ್ಯದ ಉದ್ಯಮವೆಂದರೆ ಮಿತ್ರ ಜನಾಂಗಗಳ ವ್ಯವಹಾರ ಮಾರ್ಗಗಳನ್ನುಕತ್ತರಿಸುವುದು. ವಸ್ತುತಃ ಜಪಾನು ಈಗ ಆಸ್ಟ್ರೇಲಿಯವನ್ನು ವಶಪಡಿಸಿಕೊಳ್ಳುವುದಕ್ಕೂ ಹೆಚ್ಚಾಗಿ, ಆಸ್ಟ್ರೇಲಿಯ—ಅಮೆರಿಕಗಳ, ಇಂಡಿಯಾ ಚೀನಗಳ ಮಾರ್ಗಗಳನ್ನು ಕತ್ತರಿಸುವಲ್ಲಿಯೇ ವ್ಯಸ್ತವಾಗಿದೆ. ಆದುದರಿಂದ ಮಿತ್ರ ಜನಾಂಗಗಳು ಕೂಡಲೇ ಜರ್ಮನಿಯ ಮೇಲೆ ಬಿದ್ದು, ಹಾಗೆ ರಷ್ಯದವರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವಿದೆ.

ಜಪಾನನ್ನು ಬಾಂಬು ಮಾಡುವುದೇನು?

ಜಪಾನಿನ ನಗರಗಳನ್ನೂ ಕೈಗಾರಿಕ ಕೇಂದ್ರಗಳನ್ನೂ ಬೊಂಬ್ ಮಾಡಬಲ್ಲ ಮೃತ್ಯುಕಾರಕ ಯಂತ್ರಗಳಾಗಲೇ ಸಿದ್ಧವಾಗಿವೆ ಎಂದು ಅಮೆರಿಕದ ಒಂದು ಪತ್ರಿಕೆ ಆಧಾರಸಹಿತವಾಗಿ ತಿಳಿಸುತ್ತಿದೆ. ಫ್ಲಾಗ್ಲನ್ಸ್. ಬಿ. ೧೯ ಮತ್ತು ಗ್ಲೆನ್ ಮಾರ್ಟಿನರ ಹಾರಾಡುವ ದೋಣಿಗಳು ೬ ಸಾವಿರ ಮೈಲುಗಳ ಘಾಸಲೆಯಲ್ಲಿ ಕೆಲಸ ಮಾಡಬಲ್ಲವುಗಳಾಗಿದ್ದು, ಅವು ೧೩ ಟನ್ ಬೊಂಬುಗಳನ್ನು ಹೊರುವ ಶಕ್ತಿಯುಳ್ಳವು ಎಂದು ಹೇಳಲಾಗಿದೆ. ಹಾಗೆ ಅವು ಅಲಾಸ್ಕದಿಂದ ೩ ಸಾವಿರ ಮೈಲಿನ ಜಪಾನಿಗೆ ಹಾರಲು ಸಾಧ್ಯವೆಂದಾಯಿತು.

ದೂರದ ಪೂರ್ವ ದೇಶಗಳ ವಿದ್ಯಮಾನಗಳನ್ನು ಚೆನ್ನಾಗಿ ಬಲ್ಲ ಸೆನೆಟರ್ ಪಿಟ್ಟರ್ ತೋವುಸರು, ಅಮೆರಿಕವು ಕೂಡಲೆ ಜಪಾನನ್ನು ಬೊಂಬ್ ಮಾಡುವ ಕುರಿತು ಒತ್ತಾಯ ಪಡಿಸಿದ್ದಾರೆ. "ಒಸಾಕಾ—ಟೋಕಿಯಗಳ ಯುದ್ಧ ಸಾಮಗ್ರಿಗಳ ಪ್ರತಿಯೊಂದು ಕಾರ್ಖಾನೆಯ ಮೇಲೂ ಒಂದೆರಡು ಸಾವಿರ ಬಾಂಬು ಹಾಕಿದರೆ ಆಗ ಜಪಾನರ ಕೈಗಾರಿಕೆಯ ಹೃದಯವೇ ವ್ಯತ್ಯಸ್ತವಾಗುವುದು; ಜಪಾನರಿಗೆ ಈ ಯುದ್ಧದಲ್ಲಿ ದೊಡ್ಡ ಭೀತಿ ಎಂದರೆ, ಎಲ್ಲಿ ಯುದ್ಧ ತಮ್ಮ ಮನೆ ಬಾಗಿಲಿಗೆ ಬಂದೀತೋ?" ಎಂಬುದೇ.

ಹಾಗಾದರಿನ್ನು ಯುದ್ಧ ತಮ್ಮ ಮನೆಯ ಬಾಗಿಲಿಗೇ ಬಂದಿದೆ ಎಂದು ಜಪಾನರು ತಿಳಿಯುವಂತೆ, ಅಮೆರಿಕದ ಮಿತ್ರರು ಯಾವಾಗ, "ಆಗಲೇ ಸಿದ್ಧವಾಗಿರುವ ಆ ಮೃತ್ಯುಕಾರಕ ಯಂತ್ರ"ಗಳನ್ನು ಜಪಾನಿನ ನಗರಗಳ ಮೇಲೂ, ಅಲ್ಲಿನ ಕೈಗಾರಿಕೆಗಳ ಕೇಂದ್ರಗಳ ಮೇಲೂ ಉಪಯೋಗಿಸಿ ಕೃತಕೃತ್ಯರಾಗುವರೋ ನೋಡಬೇಕು!

ಸರ್ ಎಸ್ ಕ್ರಿಪ್ಸ್‌ರ ಭೇಟಿಗಾಗಿ

ಇದೇ ಮಾರ್ಚಿ ತಾ. ೨೮ರ ಸುಮಾರಕ್ಕೆ ಸರ್ ಎಸ್. ಕ್ರಿಪ್ಸರು ಕಾಂಗ್ರೆಸ್ಸಿನ ೪-೬ ಮಂದಿ ಮುಂದಾಳುಗಳಿಗೆ ಭೇಟಿ ಕೊಡುವರೆಂದು ತಿಳಿದು ಬಂದಿದೆ. ಈ ಸಂಬಂಧ ಕೆಲ ಮುಂದಿ ಗವರ್ನರುಗಳೂ ದಿಲ್ಲಿಗೆ ತೆರಳುವರು. ಸಿಂಧ್ ಪ್ರಧಾನರು, ಸರ್ ಟಿ. ಬಿ. ಸಪ್ರುಗಳಿಗೆ ಕ್ರಿಪ್ಸರ ಭೇಟಿಯ ಸಂಬಂಧ ಆಹ್ವಾನ ಹೋಗಿದೆಯಲ್ಲದೆ ಪಂಜಾಬಿನ ಪ್ರಧಾನರು ನಮ್ಮ ರಾಷ್ಟ್ರಪತಿಗಳನ್ನೂ ಕಂಡು ಮಾತಾಡಲಿರುವರು.

ಭಾರತೀಯರ ಕೇಳಿಕೆಗಳಿಗೆ ಅಮೆರಿಕದವರ ಸಹಾನುಭೂತಿ

"ಸರ್ ಕ್ರಿಪ್ಸ್‌ರ ಭಾರತದ ರಾಯಭಾರವು ಸಾರ್ಥಕವಾಗಲಿ" ಎಂದು ಅಮೆರಿಕದ ಅಧಿಕಾರಿವರ್ಗವು ಹಾರೈಸಿರುವುದಲ್ಲದೆ, ಭಾರತದೊಡನೆ ತನ್ನ ಸಹಾನುಭೂತಿ ಇದೆ ಎಂದೂ ಅದು ವ್ಯಕ್ತಗೊಳಿಸಿದೆ.

ರಾಷ್ಟ್ರಪತಿಗಳ "ನ"ಕಾರ

ಲಂಡನ್ ಪತ್ರಿಕೆಗಳಲ್ಲಿ "ಭಾರತದ ಕಾಂಗ್ರೆಸ್ ನಾಯಕರಲ್ಲಿ ಭಿನ್ನಾಭಿಪ್ರಾಯದ ಬಿರುಕು ಉಂಟಾಗಿದೆ" ಎಂದು ಪ್ರಕಟವಾದುದನ್ನು ರಾಷ್ಟ್ರಪತಿ ವಿಶ್ವಾಸರು ಅಲ್ಲಗಳೆದಿದ್ದಾರೆ.

ಮಳೆಗಾಲದ ಒಂದು ದಿನ

ಪ್ರತಿಯೊಂದಾಗಿ ರೂಪಾಯಿಯು ಕೂಡುತ್ತಾ ಹೋಗುವುದು. ಜಾಗರೂಕನಾದ ಮನುಷ್ಯನು ಮಳೆಗಾಲದ ದಿನಗಳಿಗಾಗಿ ಉಳಿಸುವನು. ಅವನು ತನ್ನ ಭವಿಷ್ಯದೊಂದಿಗೆ ಆಟವಾಡುತ್ತಿರಬಾರದು. ಹಾಗೆಯೇ ನೀವು ನಿಮ್ಮ ಆರೋಗ್ಯದೊಂದಿಗೆ ಆಟವಾಡುತ್ತಿರಬಾರದು. ಕೆಮ್ಮು, ಅದು ಎಂತಹ ಕಾರಣದಿಂದಲೇ ಇರಲಿ, ಆರಂಭವಾದೊಡನೆ ಗ್ಲೈಕೊಡಿನ್ ಟರ್ಪ್ ನಾಶಕನನ್ನು ತೆಗೆದುಕೊಳ್ಳಿರಿ. ದ್ವಿಗುಣಿತ ಶಕ್ತಿಯಿಂದ ರೋಗಲವು ಎಲ್ಲೇ ಇರಲಿ—ಗಂಟಲು, ಶ್ವಾಸಕೋಶ, ಇವುಗಳನ್ನೆಲ್ಲಾ ಸರಿಮಾಡಿ ಕೆಮ್ಮನ್ನು ಸಂಪೂರ್ಣವಾಗಿ ಸಿಬಿಡುವುದು. ಯಾವಾಗಲೂ ಮನೆಯಲ್ಲಿ ಒಂದು ಬಾಟ್ಲಿ ಇಟ್ಟುಕೊಂಡಿರಿ.

ಕೆಮ್ಮನ್ನು ಕಡಿವು ಮಾಡಿ ಗುಣಪಡಿಸುವುದು

ಅಲೆಂಬಿಕ್ ಕೆಮಿಕಲ್ ವರ್ಕ್ಸ್ ಕಂಪನಿ ಲಿಮಿಟೆಡ್. ಬರೋಡಾ.

ಆಯುರ್ವೇದ ಸಾರ

ಅಮೂಲ್ಯ ಕನ್ನಡ ವೈದ್ಯ ಗ್ರಂಥ

ಪಂಡಿತರು ಅಗತ್ಯವಾಗಿ ತಿಳಿದಿರಬೇಕಾದ ತತ್ವಗಳನ್ನೆಲ್ಲಾ ಬಹು ಗ್ರಂಥಗಳಿಂದ ಸಂಗ್ರಹಿಸಿ, ಬೇಕಾದಲ್ಲಿ ಪಾಶ್ಚಾತ್ಯ ಡಾಕ್ಟರರ ಮತ ಸಹ, ವಿರಳವಾಗಿ ವರ್ಣಿಸಿರುವ ಕನ್ನಡ ಗ್ರಂಥ ಇದು ಒಂದೇ. ಬಹು ಪ್ರಯೋಜನಕಾರಿಯಾಗಿ ಕಂಡ ಅನೇಕ ಹೊಸ ಔಷಧ ಯೋಗಗಳು ಮತ್ತು ಸ್ವತಂತ್ರವಾಗಿ ಚಿಕಿತ್ಸೆ ಮಾಡುವುದಕ್ಕೆ ಬೇಕಾದ ಬಹಳ ಅನುಭವಗಳು ಇದರಲ್ಲಿ ಇವೆ. ನಾಡೀ ಪರೀಕ್ಷೆ ವಿಷಯದಲ್ಲಿ ಬೇರೆಲ್ಲಿಯೂ ಕಾಣದ ವಿಶೇಷ ವಿವರಗಳು ಸಹ ಈ ಪುಸ್ತಕದಲ್ಲಿ ಇದೆ. ಗ್ರಂಥಮುಂಡಲದ ರಚನೆ ಮತ್ತು ಅಧಿಕಾರ, ಪ್ರತಿ ಅಧ್ಯಾಯದಲ್ಲಿ 'ದೃಷ್ಟಫಲಾಕ್ಷಿ,' 'ಪೃಥಗ್ಯೋಗೋಕ್ತೌಷಧಗಳು', 'ಕರಣಾಂತ ಟಿಪ್ಪಣಿ', ಇವೇ ಮೊದಲಾದ ವಿಶೇಷ ಭಾಗದ ವಿಶೇಷಗಳು.

"ನನಗೆ ತಿಳಿದ ಮಟ್ಟಿಗೆ ಶ್ರೀ। ರಾಮುಕೈ ಅವರ ಆಯುರ್ವೇದ ಸಾರಕ್ಕೆ ಸಮಾನ ಬೇರೊಂದಿಲ್ಲ.....ಅವರ ಅಗ್ರಗಣ್ಯತೆಗಾಗಿ ಅವರು ಕರ್ನಾಟಕದಲ್ಲಿ ಇಂದು ಪಬ್ಬ ವೈದ್ಯಗುರುವಿನ ಪದವಿಯಲ್ಲಿದ್ದಾರೆ." (ತಾರಾನಾಥ ಪಂಡಿತಜಿಯವರ "ಪ್ರಸಿದ್ಧ ರಸೌಷಧಿಗಳು" ಪುಟ 10.)

ಪ್ರತಿ ಬೇಕಾದವರು ತ್ವರೆಯಾಗಿ ಕೆಳಗಣ ವಿಳಾಸಕ್ಕೆ ಬರಕೊಳ್ಳಬೇಕು. ಎರಡು ಅಥವಾ ಹೆಚ್ಚು ಪ್ರತಿಗಳನ್ನು ಒಮ್ಮೆಯೇ ಕೊಂಡುಕೊಳ್ಳುವವರಿಗೆ ರೂಪಾಯಿಗೆ ಒಂದಾಣೆಯಿಂದ ಎರಡಾಣೆ ವರೆಗೆ ಯುಕ್ತ ಕಂಡ ಡಿಸ್ಕೌಂಟು ಕೊಡಲಾಗುವುದು.

ಪ್ರಥಮ ಭಾಗ (೬೦೦ ಪುಟ) ರೂ 6-8-0.
ದ್ವಿತೀಯ ಭಾಗ (೫೦೦ ಪುಟ) ರೂ. 6-8-0
(ಟಪ್ಪಾ ಹಾಸಲು ಬೇರೆ)

ವಿಳಾಸ: ಪಿ. ಲಿಂಗಮಕೃಷ್ಣಯ್ಯ, ಬಿ. ಎ.,
(ನಿವೃತ್ತ) ಜಿಲ್ಲಾ ರಿಜಿಸ್ಟ್ರಾರ್,
ಕಂಬಳ, ಪೋಸ್ಟ್, ಮಂಗಳೂರು

ಸಾಬೂನು ಬಟ್ಟೆಗಳ ಮಲಿನತೆ ಸಂಪೂರ್ಣವಾಗಿಯೂ ಸಂಪೂರ್ಣ ಲ ಮಾಡುತ್ತದೆ.

ಶಲ್ ಸಾಬೂನು ಕಾರ್ಯದಲ್ಲಿ ಹಾನಿ ಇದ್ದಿಲ್ಲ. ನಾಜೂಕಾದ ಬಟ್ಟೆಗಳು ಅದರ ನೊರೆಯಲ್ಲಿ ಸುರಕ್ಷಿತವಾಗಿರುವುವು.



ಜಂಗ್ ಸ್ಪೆಶಲ್ ಸಾಬೂನು ಮಲಿನತೆಯನ್ನು ಜಾಗ್ರತೆಯಾಗಿ ನಿರ್ಮೂಲ ಮಾಡುವುದರಿಂದ ಮನೆಯಲ್ಲಿ ಬಟ್ಟೆಗಳನ್ನು ಒಗೆಯುವುದು ಅತಿಸುಲಭ.

ಜಂಗ್ ಸ್ಪೆಶಲ್ ಸಾಬೂನು ಜೊತೆಗೆ ಖ್ಯಾತಿಪಡೆದ ಜಂಗ್ ಒಗೆಯುವ ಸಾಬೂನು ಉಂಟು. ಇದರ ಬೆಲೆ ಕಡಿಮೆ. ಗೃಹಕೃತ್ಯಕ್ಕೆ ಸರಾಗವಾದ ಸಾಬೂನು. ಜಂಗ್ ಒಗೆಯುವ ಸಾಬೂನು ಘನಾಕೃತಿ, ಬಾರುಗಳು, ಬಿಲ್ಲೆಗಳ ಮತ್ತು ಚೂರುಗಳ ರೂಪಾಂತರಗಳಲ್ಲಿ ಎಲ್ಲಾ ಅಂಗಡಿಗಳಲ್ಲೂ ದೊರಕುವುದು.



ಜಂಗ್ ಸ್ಪೆಶಲ್ ಸಾಬೂನು ಪ್ಯಾಕೆಟುಗಳು ೩ ಸೈಜುಗಳಲ್ಲಿ ದೊರಕುತ್ತದೆ.

ಪ್ರಾಣಿಗಳ ಕೊಬ್ಬು ಮಿಶ್ರಿತವಾಗಿಲ್ಲ.

ಟಾಮ್ಕೊ ಸೇಲ್ಸ್ ಡಿಪಾರ್ಟ್‌ಮೆಂಟ್,

2 A. ಸೌತ್ ಪೆರೇಡ್, ಬೆಂಗಳೂರು.

ದಿ ತ[illegible] ಆಯಿಲ್ ಮಿಲ್ಸ್ ಕಂಪೆನಿ, ಲಿ.

[illegible]ಪುರಂ ಮತ್ತು [illegible]ಚಾಯಿ.

THE CANARA BANKING CORPORATION, LTD.

(Incorporated in British India with limited liability)

will now receive

SEASON DEPOSITS

for a period of 4 months at 3% P. A

at all its Branches.

ಕಂಠೀರವ

KANTEERAVA

KANARESE, BI-WEEKLY

ಕನ್ನಡದ ನೆರಳಲ್ಲಿ ನಾವು ಬಾಳಬೇಕು; ನಮ್ಮ ಆಶಯದಲ್ಲಿ ಕನ್ನಡ ಬೆಳೆಯಬೇಕು; ಕರ್ನಾಟಕದ ಕೊಳಕನ್ನು ಸುಡುವ ಕಾಂತಿಯ ಒಂದು ಕಿಡಿ ಹಾರುವ ವರೆಗೆ ಕನ್ನಡಕ್ಕೆ "ಸ್ವರಾಜ್ಯ" ದೊರಕದು — **ಸೂಕ್ತಿಮಾಲೆ.**

XXIII] ಮಂಗಳೂರು, ತಾರೀಕು ೨೪—೩—೧೯೪೨ [೧೦೨

೧೮೬೪ ಚಿತ್ರಭಾನು ಸಂವತ್ಸರದ ಚೈತ್ರ ಶು ೭ ಮಂಗಳವಾರ

ದೂರದ ಹತ್ತಿರದ ಸಂಗ್ರಾಮ ರಂಗ

ದಿನ ಹೋದಂತೆ, ಬರ್ಮದಲ್ಲಿನ ಸಂಗ್ರಾಮ ರಂಗವು ಎಲ್ಲರ ಚಿತ್ತವನ್ನು ಅತ್ತತ್ತ ಸೆಳೆಯುತ್ತಿದೆ. ಮಿತ್ರಪಕ್ಷದವರು ಇದು ವರೆಗೆ ಎಷ್ಟೋ ಸಾಹಸದಿಂದ ಕಾದಾಡುತ್ತಿದ್ದರೂ, ಜಪಾನೀಯರ ಹಾವಳಿ ಇನ್ನೂ ಅಲ್ಲಿ ಹೆಚ್ಚುತ್ತಿದೆ ಎಂಬುದೇ ಅದಕ್ಕೆ ಕಾರಣ.

ನಮ್ಮ ಸಮಿಾಪದ ರಣರಂಗವಾದ ಬರ್ಮದಲ್ಲಿ, ಇಂದಿನ ಕಾದಾಟದ ಪರಿಸ್ಥಿತಿಯಾದರೂ ಏನು? ಸುಧಾರಿಸಿದೆಯೇ? ಹಾಗೆಂದು ತೋರುವುದಿಲ್ಲ. ನಮ್ಮ ಸೈನ್ಯಗಳು ಅಲ್ಲಿ ಶತ್ರುದಾಳಿಯನ್ನು ನಿರೀಕ್ಷಿಸುತ್ತ, ಅದನ್ನು ಪ್ರತಿಭಟಿಸುವುದಕ್ಕೆ ಮಾತ್ರ ಕಾದಿರುವ ಹಾಗಿದೆ.

ಬರ್ಮದಲ್ಲಿ ಈಗ ಜಪಾನರ ನುಗ್ಗಾಟವೆಂದರೆ ವ್ಯಾಂಡಲೆಯ ರಸ್ತೆಯಲ್ಲಿ,—ಹಿಂದಿನ ಆ ಬರ್ಮಾ ರೋಡಿನಲ್ಲಿ. ಅಲ್ಲಿ ಟೌಂಗೂವೇ, ಅವರಿಗೆ ಮೊದಲು ಬೇಕಾದುದು. ಪ್ರಕೃತ, ನಮ್ಮ ಮುಂಭಾಗದ ಸೇನೆಗಳು, ಟೌಂಗೂವಿನಿಂದ ೪೦ ಮೈಲುಗಳ ದೂರದಲ್ಲಿ ಇವೆ ಎಂಬುದರಿಂದ, ಮುಖ್ಯವಾದ ಆ ನಮ್ಮ ಸೇನೆಗಳು ಮತ್ತೂ ಉತ್ತರಕ್ಕೆ ಹಿಂದೆ ಸರಿದಿವೆ ಎಂದೂ, ಶಿವಿಗ್ಯಿನಿಂದ ೪೦ ಮೈಲುಗಳಷ್ಟು ದೂರಕ್ಕೂ ಮುಂಬರಿಯಲು, ಜಪಾನೀ ಬಲಗಳಿಗೆ ಯಾವ ಹಿಡಿತಡೆಯೂ ಇರಲಿಲ್ಲವೆಂದೂ ತಿಳಿಯುವಂತಾಗಿದೆ.

ಈರಾವತಿ ರಂಗವೆಂದು ಪ್ರಸಿದ್ಧವಾದ ಆ ಪ್ರೋಮ್ ರಸ್ತೆಯಲ್ಲಿ, ಪ್ರೋಮ್ ಜಪಾನರ ಪ್ರಥಮ ಗುರಿಯಾಗಿದೆ; ಅವರ ಅನಂತರದ ಗುರಿ ಎಂದರೆ, ಅಲ್ಲಿಂದ ೧೫೦ ಮೈಲು ದೂರವಿರುವ ಈರಾವತಿಯ ಎಣ್ಣೆಯ ಗಣಿಗಳು. ಆಗಲೇ ಜಪಾನಿಗಳು ಸಣ್ಣ ದೋಣಿಗಳನ್ನು ಉಪಯೋಗಿಸಿಕೊಂಡು, ಈರಾವತಿ ನದಿಯಲ್ಲಿ ಥರವಾಡಿಯ ಉತ್ತರಕ್ಕೆ ೨೦ ಮೈಲುಗಳ ವರೆಗೂ ಬಂದಿದ್ದಾರೆ. ಇಲ್ಲಿ ಅವರ ಉದ್ದೇಶ, ಮುಂದಿನ ತಮ್ಮ ಯುದ್ಧಕಾರ್ಯಗಳಿಗೆ, ಜಪಾನೀಯರ ಪರವಾಗಿರುವ ಬರ್ಮಾಯರ ಸಹಕಾರವನ್ನು ಸಂಪಾದಿಸುವುದೇ ಆಗಿದೆ. ಆದರೆ ಜಪಾನಿಗಳ ಮುಖ್ಯ ಸೇನೆಗಳು ಥರವಾಡಿಯಿಂದ ಸುಮಾರು ೪೫ ಮೈಲುಗಳ ದೂರವಿರುವ ಕಾರಣ, ಒಂದು ವೇಳೆ ದ್ರೋಹಿಗಳಾದ ಆ ಬರ್ಮಾಯರ ಸಹಕಾರವು ಜಪಾನರಿಗೆ ಲಭಿಸಿದರೂ ಕೂಡ, ಅಲ್ಲಿ ಘೋರ ಕಾದಾಟ ನಡೆಯಲು ಇನ್ನೂ ಕೊಂಚ ಕಾಲ ಬೇಕು.

ಇದುವರೆಗೆ ತಾವು ಆಕ್ರಮಿಸಿದ ಬರ್ಮದ ಭಾಗಗಳಲ್ಲಿನ ಹೇರಳ ದೋಣಿಗಳನ್ನು ಉಪಯೋಗಿಸಿಕೊಂಡು, ಹಾಗೆ ಈರಾವತಿ ನದಿಯ ಕಾಳಗ ಪೂರೈಸಬೇಕೆಂದು ಜಪಾನೀಯರ ಇಚ್ಛೆ. ರಾತ್ರಿ ಕಾಲದಲ್ಲಿ ಈ ದೋಣಿಗಳಿಂದ ಸೈನಿಕರನ್ನು ಇಳಿಸಿ, ಪ್ರೋಮ್ ರಸ್ತೆಯನ್ನು ಮುತ್ತಬೇಕೆಂದು ಜಪಾನರ ಹಂಚಿಕೆ. ಹೀಗೆ ಈರಾವತಿ-ಟೌಂಗಾ ಎಂಬೀ ಎರಡು ರಂಗಗಳಲ್ಲಿ ಕಾದುತ್ತಿರುವಾಗ, ನಡುವೆ ಇರುವ ಒಂದು ಅರಣ್ಯ ಪ್ರದೇಶವನ್ನೂ ಮರೆಯಲಾಗುವುದಿಲ್ಲ. ಇಲ್ಲಿಯೇ ಈಗ ಜಪಾನರು ಬ್ರಿಟಿಷ್ ಸೇನೆಗಳನ್ನು ಮುತ್ತಿ ಸುತ್ತುಗಟ್ಟಬೇಕೆಂದಿರುವುದು! ಈ ಕಾರ್ಯವು,

ವಿದೇಶ—ಹಿಂದೂದೇಶ

"ಸಿಲೋನಿನವರು ಗಾಬರಿಯಾಗ ಬೇಕಿಲ್ಲ"

ಹಾಗೆಂದು ಸಿಲೋನಿನ ಸರ್ವ ಸೇನಾಪತಿಗಳಾದ ವೈಸ್ ಎಡ್ಮಿರಲ್ ಸರ್ ಜೋಫ್ರಿ ಲೈಟನ್ ಅವರು ಒಂದು ಪತ್ರಿಕಾ ನಿಧಿಗಳ ಕೂಟವನ್ನು ಉದ್ದೇಶಿಸಿ ನುಡಿದರು.

ನಾನಾ ವಾರ್ತೆಗಳು

ಯುದ್ಧ ಮಂತ್ರಿಮಂಡಲದ ಒಬ್ಬ ಸದಸ್ಯರಾದ ಲಾರ್ಡ್ ಬೀವರ್‌ಬ್ರೂಕರು ಮಿತ್ರರ ಯುದ್ಧೋತ್ಪತ್ತಿಯ ಸಂಗ್ರಹ ಕಾರ್ಯಕ್ಕಾಗಿ ಅಮೆರಿಕಕ್ಕೆ ಹೊರಟಿರುವರು; ಅಮೆರಿಕವು ವಿಮಾನಗಳನ್ನು ಸರಬರಾಯಿ ಮಾಡುತ್ತಿರುವುದರಿಂದ ಆಸ್ಟ್ರೇಲಿಯದ ರಕ್ಷಣೆಗೆ ಅನುಕೂಲವಿದೆ ಎಂದು ಅಲ್ಲಿನ ಒಬ್ಬ ಸೇನಾನಾಯಕರ ಧೈರ್ಯ; ಉತ್ತರ ಹನಾಸಿನಲ್ಲಿ ಜಪಾನೀಯರು ಜವಾನಿಗೆ ಭಾರಿ ನಷ್ಟ ಮಾಡಿದ್ದಾರೆ; ನ್ಯೂಗಿನಿ ಜಲಧಿಯ ಬಳಿ ಜವಾನರ ೨೫ ಹಡಗುಗಳಿಗೆ ಗಾಸಿಯಾಗಿದೆ; ಬರ್ಮದ ಟೌಂಗೂವಿನ ಬಳಿ ಘೋರ ಯುದ್ಧ ನಡೆಯುತ್ತಿದೆ; ಭಾರತದಲ್ಲಿ ಆದಾಯ ತೆರಿಗೆಯ ಕನಿಷ್ಟ ಮಿತಿಯ ಆದಾಯ ರೂ. ೧೫೦೦ ಎಂದು ನಿರ್ಧಾರವಾಗಿದೆ; ಬ್ರಿಟನಿಗೆ ಕನಡದವರು ಯುದ್ಧ ಕಾಣಿಕೆಯಾಗಿ ಒಂದು ಮಿಲ್ಯ ಡಾಲರು ಕೊಟ್ಟರು.

ಭಾರತಕ್ಕೆ ಮಹಿಳೆಯರ ರಕ್ಷಣಾ ಸೇನೆ

ಇಂಡಿಯದ ರಕ್ಷಣೆಗಾಗಿ ಭಾರತ ಮಹಿಳೆಯರದೊಂದು ದಳವು ಏರ್ಪಡುವುದು. ಇದರ ಸೇನಾಪತಿಗಳು ನಮ್ಮ ವೈಸರಾಯರ ಪತ್ನಿಯವರು.

ಮೆಕಾರ್ತರವರ ಹೊಸ ಪದವಿ

ಫಿಲಿಪ್ಪೈನ್ಸ್ ದ್ವೀಪಗಳನ್ನು ೩ ತಿಂಗಳು ಕಾಪಾಡಿದ ಅಮೆರಿಕದ ಸೇನಾಪತಿ ಜನರಲ್ ಡಾಗ್ಲಸ್ ಮೆಕಾರ್ತರವರು ಈಗ ಆಸ್ಟ್ರೇಲಿಯ ಮತ್ತು ಫಿಲಿಪ್ಪೈನ್ಸ್‌ಗಳ ಸರ್ವ ಸೇನಾಪತಿಗಳಾಗಿ ನಿರ್ಮಿಸಲ್ಪಟ್ಟಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿ

ವಾರ್ಧಾದಲ್ಲಿ ಈಚೆಗೆ ಜರುಗಿ ಕಮಿಟಿ ಸೇಟ್ ಜಮುನಾಲಾಲ್

ಈ ಪ್ರದೇಶವನ್ನು ಚೆನ್ನಾಗಿ ಬಲ್ಲ ಪರವಾಗಿರುವ ಬರ್ಮಾಯರ ನೆರವೇರಬಹುದೆಂದು ಜಪಾನೀಯರ ನಂಬಿಕೆ.

ದೂರದ ರಣರಂಗವಾದ ಕಾಖೋರ್ ಎನ ಬಳಿ ರಷ್ಯದವರ ಕೈಮೇಲಾಗುತ್ತಿದೆ. ಅಲ್ಲಿ ಆ ನಗರವನ್ನು ಧ್ವಂಸಮಾಡಿ ಓಡಬೇಕಂದು ಜರ್ಮನರ ಯತ್ನ. ಕಾಖೋರ್ ಈಗ ರಷ್ಯದವರಿಂದ ಸುತ್ತುವರಿಯಲ್ಪಟ್ಟು ಜರ್ಮನ್ ಸೇನೆಗಳು ಅಲ್ಲಿ ಸಿಕ್ಕಿಬಿದ್ದಿವೆ. ಲೆನೆನ್‌ಗ್ರಾಡ್ ರಂಗದಲ್ಲಿಯೂ ಜರ್ಮನರ ತಾಪತ್ರಯಗಳು ಹೆಚ್ಚಿದ್ದು ಅವಕ್ಕೆ ಉಳಿಗಾಲವಿಲ್ಲವಾಗಿದೆ. ಅಂತೂ, ಎಲ್ಲ ರಂಗಗಳಲ್ಲಿಯೂ, ಜರ್ಮನರ ಹಿಡಿತದ ಮುಖ್ಯ ಪ್ರದೇಶಗಳು ಕೈಬಿಟ್ಟುಹೋಗುವುದರಲ್ಲಿವೆ.

ಮಂಗಳೂರು

ಸಂತೋಷ ಕೂಟ

ಈಚೆಗೆ ಮಂಗಳೂರು ಕಾಫಿ ಮತ್ತು ಬೆಳೆಗಳ ವರ್ತಕ ಸಂಘದವರು ಮೈಸೂರಿನ ಫ್ರಾಂಚೈಸ್ಸ್ ಹಾಗೂ ರೆವಿನ್ಯೂ ಶಾಖಾ ಸಚಿವರಾದ, ಇಂಡಿಯನ್ ಕಾಫಿ ಮಾರ್ಕೆಟ್ ವಿಸ್ತರಣದ ಬೋರ್ಡಿನ ಚೆಯರ್‌ಮ್ಯಾನರಾದ ರಾಜಮಂತ್ರಪ್ರವೀಣ ಕೆ. ವಿ. ಅನಂತರಾಮನ್ ಅವರಿಗಾಗಿಯೂ ಈಗ ಮದ್ರಾಸ್ ಸೂಲಿನ ಶಾಖೆಯ ಕಮಿಶನರರಾಗಿ ನೇಮಿಸಲ್ಪಟ್ಟ ಕಾಫಿ ಕಂಟ್ರೊಲರ್ ಶ್ರೀ। ಎಂ. ಪಿ. ಪೈ ಅವರಿಗಾಗಿಯೂ ಸ್ಥಳೀಯ ಕೆನರಾ ಬೇಂಕಿನ ಮುಖ್ಯ ಕಾರ್ಯಾಲಯದಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಕಾಫಿಯ ಡೆ॥ ಕಂಟ್ರೊಲರ್ ರಾ. ಸಾ. ಎಂ. ಆರ್. ಬಂಗೇರರೂ, ಬೆಂಗಳೂರು ಡೆ॥ ಕಮಿಶನರ್ ಎಂ। ನರೋನಾ ಅವರೂ ಈ ಸಮಾರಂಭಕ್ಕೆ ಆಗಮಿಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ। ಪಿ. ಉಮಾನಾಥ ಭಂಡಾರಿಗಳು ಅತಿಥಿಗಳಿಗೆ ಸ್ವಾಗತ ಬಯಸಿ, ಶ್ರೀ। ಪೈಗಳನ್ನು ಬೀಳ್ಕೊಡುವ ಮಾತಾಡಿದ ಮೇಲೆ, ಶ್ರೀ। ಅನಂತರಾಮನ್‌ರವರು ಈ ಸತ್ಕಾರಕ್ಕಾಗಿ ವಂದಿಸಿ, ಸರಕಾರದ ಮತ್ತು ಕಾಫಿ ವ್ಯವಹಾರ ಕರ್ತರ ಸಹಕಾರದಿಂದ ಕಾಫಿ ಕೈಗಾರಿಕೆ ಹೇಗೆ ವೃದ್ಧಿಗೊಳ್ಳಬಹುದೆಂದು ಸೂಚಿಸಿದರು. ಶ್ರೀ। ಪೈಗಳೂ, ಶ್ರೀ। ಬಂಗೇರರೂ ಮಾತಾಡಿದರು. ಶ್ರೀ। ರಾಮಕೃಷ್ಣ ನಾದರರು ವಂದನೆಗಳನ್ನು ಅರ್ಪಿಸಿದರು. ಶ್ರೀ। ಅನಂತರಾಮನ್ ಮತ್ತು ಪೈ ಅವರು ಮೆ॥ ಪಿ. ಎಫ್. ಎಕ್ಸ್. ಸಾಲ್ದಾನಾ ಎಂಡ್ ಸನ್ಸರ ಮತ್ತು ಮೆ॥ ಪಿಯರ್ಸ್‌ಲೆಸ್ಲಿ ಅವರ ಕಾಫಿ ವರ್ಕ್ಸ್‌ಗಳನ್ನು ಸಂದರ್ಶಿಸಿದರು. ಶ್ರೀ। ವಿ. ಎಸ್. ಕುಡ್ಪರು ಈ ಅತಿಥಿಗಳಿಗೊಂದು ಡಿನ್ನರ್ ಪಾರ್ಟಿ ಕೊಟ್ಟರು. ಅದಕ್ಕೆ ನಮ್ಮ ಜಿಲ್ಲಾ ಕಲೆಕ್ಟರ್, ಡಿ. ಎಸ್. ಪಿ. ಮೊದಲಾದವರು ಬಂದಿದ್ದರು.

ಮಂಗಳೂರು ಜಿಲ್ಲಾ ಶಾಖಾ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ

ಈ ಸಂಘದ ಜನರಲ್ ಬೋಡಿ ಮೀಟಿಂಗ್ ಅದರ ಚೆಯರ್ ಮ್ಯಾನ್ ಶ್ರೀ। ಎಂ. ವೆಂಕಟೇಶ ಪೈ ಅವರ ಭವನದಲ್ಲಿ, ಅವರ ಅಧ್ಯಕ್ಷತೆಯಲ್ಲಿ ಜರುಗಿ, ಶ್ರೀ। ಪೈಗಳು ಅಧ್ಯಕ್ಷ-ಕೋಶಾಧಿಕಾರಿಗಳಾಗಿಯೂ ಮಿಸೆಸ್ ಜೆ. ಆರ್. ಫೌಲರ್ ವೈಸ್ ಚೆಯರ್‌ಮ್ಯಾನ್, ಮಿಸೆಸ್ ಎಫ್. ಸೊನ್ಸ್ ಕಾರ್ಯದರ್ಶಿ, ಮಿಸ್ ಎಂ. ಮತಾಯಸ್ ಜತೆ ಕಾರ್ಯದರ್ಶಿಗಳಾಗಿಯೂ, ಚುನಾಯಿಸಲ್ಪಟ್ಟು ದಲ್ಲದೆ ಈ ಕಮಿಟಿಗೆ ಇತರ ೬ ಮಂದಿ ಆರಿಸಲ್ಪಟ್ಟೂ ಇರುವರು.

ಯಕ್ಷಗಾನ

ಕಳೆದ ಶನಿವಾರ ರಾತ್ರಿ, "ಕರ್ಣಾಟಕ ಥಿಯೇಟರ್ಸ್" ಮಂಗಳೂರು ಅವರ ಆಶ್ರಯದಲ್ಲಿ ಪೆಂಟ್‌ಲ್ಯಾಂಡ್ ಪೇಟೆ ಮೈದಾನಿನಲ್ಲಿ ಜಿಲ್ಲೆಯ ಕಲಾವಿದರು ಭಾಗವಹಿಸಿದ "ಕೃಷ್ಣಸಂಧಾನ"ದ ಯಕ್ಷಗಾನವು ಜರುಗಿದಾಗ, ಅಂದಿನ ಅಧ್ಯಕ್ಷರಾದ ಶ್ರೀ. ಜೂಗಪ್ಪ ಎಂ. ಎ. (ಡೆ. ಕಲೆಕ್ಟರ್) ಅವರು ಬಯಲಾಟ, ತಾಳಮದ್ದಳೆ, ಗೊಂಬೆಯಾಟ, ಛಾಯಾ ಚಿತ್ರ ಇವೇ ಮೊದಲಾದ ಲಲಿತ ಕಲೆಯ ಕುರಿತು ಹೃದಯಂಗಮ ಭಾಷಣಮಾಡಿದರು.

ಕಾಸ್ಮೊಪೊಲಿಟನ್ ಕ್ಲಬ್ ಟೆನ್ನಿಸ್ ಪಂದ್ಯಾಟ

ಸ್ಥಳೀಯ ಕ್ಲಬ್ಬಿನವರ ಈ ಪಂದ್ಯಾಟದಲ್ಲಿ ಸಿಂಗಲ್ಸ್‌ನಲ್ಲಿ ಶ್ರೀ. ವೆಂಕಪ್ಪ ರೈಗಳು ಶ್ರೀ. ಕೃಷ್ಣನಾಯಕರನ್ನೂ, ಮಿಕ್ಸೆಡ್ ಡಬ್ಲ್ಸ್‌ನಲ್ಲಿ ಮಿಸ್. ನಳಿನೀ ಬಾಯಿ, ಶ್ರೀ. ನಾರಾಯಣ ರಾಯರು, ಮಿಸೆಸ್ ಮೋನಾ ಪಿಂಟೋ, ಶ್ರೀ. ಎಂ. ಎಂ. ಪ್ರಭುಗಳನ್ನೂ, ಗಂಡಸರ ಡಬ್ಲ್ಸ್‌ನಲ್ಲಿ ಶ್ರೀ. ವೆಂಕಪ್ಪ ರೈ, ಶ್ರೀ. ಮುಕುಂದ ರಾಯರು, ಶ್ರೀ. ದತ್ತಾತ್ರೇಯ ರಾವ್, ಶ್ರೀ. ಬಿ. ಬಾಬುರಾವ್ ಅವರನ್ನೂ ಸೋಲಿಸಿದರು. ಬಹುಮಾನಗಳನ್ನು ಶ್ರೀ. ಬಿ. ವೆಂಕಟರಾಯ ಬಾಳಿಗರು ಹಂಚಿದರು; ಶ್ರೀ. ಡಿ. ಮೋಹನರಾಯರು ಧನ್ಯವಾದಗಳನ್ನು ಅರ್ಪಿಸಿದರು.

ಶ್ರೀ ರಾಮನವಮಿ ಮಹೋತ್ಸವ

ಈ ಉತ್ಸವವನ್ನು ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಶ್ರೀ ಎವೇಕಾನಂದ ಸಭೆಯವರು ಇದೇ ತಾರೀಕು ೨೯ನೇ ಗುರುವಾರ ಸಾಯಂ ಘಂಟೆ ೫.೩೦ಕ್ಕೆ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಶ್ರೀ। ಎಲ್. ಎಸ್. ಪಾರ್ಥಸಾರಥಿ ಐಯರ್, ಬಿ. ಎ., ಬಿ. ಎಲ್., ಇವರ ಸನ್ನಾನ್ಯ ಅಧ್ಯಕ್ಷತೆಯಲ್ಲಿ ಜರಗಿಸುವರು. ಸರ್ವರಿಗೂ ಸುಸ್ವಾಗತ ವಿದೆ.

ಅಲಕ್ಷಿಸಿದ ಕೆಮ್ಮು

ಪ್ರಗತಿಪರ ಎಳೆಜೀವಿತವನ್ನು ಹಾಳುಗೆಡವಿದ ಹಲವು ದುಃಖಾಂತ ಕತೆಗಳ ಕಾರಣವಾಗಿದೆ. ಈ ಕತೆ ನಿಮ್ಮ ಮನೆಗಳಲ್ಲೂ ಉಂಟಾಗದಿರಲಿ. ಕೆಮ್ಮಿನ ಮೊದಲು ಸೂಚನೆ ಕಂಡು ಬಂದೊಡನೆಯೇ ಒಂದು ಬಾಟ್ಲಿ ಶ್ವಾಸಕೋಶಗಳನ್ನು ಸಾಧುಗೊಳಿಸಿ, ಗುಣಪಡಿಸುವ ಮತ್ತು ತಡೆಯುವ ಆದರ್ಶ ಶ್ವಾಸನಾಳ ರೋಗಹಾರಿ ಟಸ್ಸ್‌ನಾಲ್ ಎಂಬ ಸುಲಭ ಹಾಗೂ ಸುರಕ್ಷಿತ ಕೆಮ್ಮಲು ಕಷಾಯವನ್ನು ಕೊಳ್ಳಿರಿ.

ಆರಂಭದಲ್ಲೇ ಟಸ್ಸ್‌ನಾಲ್‌ನಿಂದ ಚಿಕಿತ್ಸೆ ನಡೆಸಲ್ಪಟ್ಟ ಕೆಮ್ಮು ಭೀಕರ ರೂಪಕ್ಕೆ ತಿರುಗಲಾರದು, ಟಸ್ಸ್‌ನಾಲ್ ಶ್ವಾಸನಾಳ ಮತ್ತು ಕಂಠನಾಳಗಳನ್ನು ಸುರಕ್ಷಿತಗೊಳಿಸಿ, ಕಫವನ್ನು ನೀರುಮಾಡಿ, ಕಫ ಉಗುಳಲು ಸುಲಭಮಾಡಿಕೊಡುತ್ತದೆ; ನಾಯಿಕೆಮ್ಮು, ಕೆಮ್ಮು, ಮತ್ತು ಶ್ವಾಸಕೋಶ ಮತ್ತು ಗಂಟಲಿನ ಕ್ಷಯರೋಗದಿಂದುಂಟಾಗುವ ತುರಿಕೆ ಕೆಮ್ಮುಗಳ ರಸೆಳೆತವನ್ನು ಶಾಂತಗೊಳಿಸಿ ಸಮಾಧಾನಪಡಿಸುತ್ತದೆ.

ನಿರ್ದಿಷ್ಟ ಅಳತೆಯಲ್ಲಿ ನಿರಪಾಯವಾಗಿ ಬಾಲವೃದ್ಧರೂ ಟಸ್ಸ್‌ನಾಲ್‌ನ್ನು ಸೇವಿಸಬಹುದು. ನೇವಸ ಮತ್ತು ಕ್ಷಯರೋಗಗಳಿಗಾಗಿ ಸಾವಿರ ವರ್ಷಗಳ ಹಿಂದಣ ಕಾಲದ ವೈದ್ಯಾನಿಕರು ತಿಳಿದಿದ್ದ ಒಂದೇ ಗುಣದ ಎರಡು ಮೂಲಿಕೆಗಳ ಪ್ರಾಮುಖ್ಯ ಅಂಶಗಳ [illegible] ವೈಜ್ಞಾನಿಕ ಔಷಧಿ. ಶ್ವಾಸನಾಳ ರೋಗಗಳಿಗೆ ತಕ್ಷಣ ಗುಣಕಾರಿಯಾದ ಚಿಕಿತ್ಸೆಮಾಡಿ, ಅ [illegible] ದೃಢಪಡಿಸಿ ಮತ್ತು ಶ್ವಾಸನಾಳದ ರೋ [illegible] ಬೆಳೆಯದಂತೆ ರಕ್ಷಿಸಲು ಬೇಕಾದ ಹಿಂದಿನ ಅನುಭವ ಮತ್ತು ಇಂದಿನ ವೈಜ್ಞಾನಿಕ ಸಂಶೋಧಗಳ ಸಮ್ಮಿಲನವೇ ಈ ಟಸ್ಸ್‌ನಾಲ್.

ನಿಮ್ಮ ಕೆಮಿಸ್ಟರಲ್ಲಿ

ಟಸ್ಸ್‌ನಾಲ್

ಶ್ವಾಸಕೋಶ ರೋಗಗಳೆಲ್ಲವುಗಳ ವಿರುದ್ಧ ನಿಂತಿರುವದು.

ಮಾರ್ಟಿನ್ ಮತ್ತು ಹ್ಯಾರಿಸ್, ಲಿ.,

ಕಲ್ಕತ್ತಾ, ಬೊಂಬಾಯಿ.

T. R. 2.


ಬಲ್ಲಪ್ಪ ಮತ್ತು ಒ
ಮೆನೇಜರರು ಈಗತಾನೇ ನನ್ನ ಕೆಲಸದ ವಿಷಯದಲ್ಲಿ ನನ್ನನ್ನು ಶ್ಲಾಘಿಸಿ ನನ್ನ ಸಂಬಳವನ್ನು ಹೆಚ್ಚಿಸಿದರು.
ಒರೆವುದಕ್ಕೆ ನೀನು ಳ
ನ್ನಂತೆ ನಾನೂ ಏಕ
ಕೆಲಸಮಾಡಬೇಕೆಂದು
ಆದರೆ ಈಚೆಗೆ ನನಗೆ
ಗಟ್ಟದೆ, ಚುರುಕಾ
ಮಾಡಲಾಗುವುದಿಲ್ಲ
ನಿನ್ನ ಬುದ್ಧಿಯು ಸ್ವಚ್ಛವಾಗಿಯೂ, ಚುರುಕಾಗಿಯೂ ಇಲ್ಲದಿದ್ದರೆ ಸಾಮರ್ಥ್ಯತೆಯಿಂದಲೂ ಜಾಗ್ರತೆಯಾಗಿಯೂ ಕೆಲಸ ಮಾಡಲು ಅಸಾಧ್ಯ. ನನ್ನ ಹಾಗೆ ನೀನು
ಈನೊಸ್
"ಫ್ರೂಟ್ ಸಾಲ್ಟ್"
ಪ್ರತಿ ಬೆಳಿಗ್ಗೆ ತೆಗೆದುಕೊಳ್ಳಬೇಕು ಮತ್ತು ದಿನವೆಲ್ಲಾ ಬುದ್ಧಿ ಭ್ರಮೆಯಿಲ್ಲದೆ ಚುರುಕಾಗಿಯೂ ಇರಬೇಕು.
ಬೆಳಿಗ್ಗೆ ಎದ್ದ ಕೂಡಲೇ ಒಂದು ಲೋಟ ತಿಳಿಯಾದ ಈನೊಸ್ ಫ್ರೂಟ್‌ಸಾಲ್ಟ್ ಸೇವಿಸಿದರೆ ನಿಮ್ಮ ಬುದ್ಧಿಯು ಸ್ವಚ್ಛವಾಗಿಯೂ, ಚುರುಕಾಗಿಯೂ ಇರುವುದು. ಯಾಕೆಂದರೆ ಈನೊಸ್ ಆಹಾರವೃತ್ತಿಗಳ ಅಜಾಗರೂಕತೆಯಿಂದುಂಟಾಗುವ ಸಣ್ಣ ಶಾರೀರಿಕ ಅವ್ಯವಸ್ಥೆಗಳಾದ ತಲೆನೋವು, ಸೈತ್ಯ, ಅಜೀರ್ಣ, ಮಲಬದ್ಧತೆ ಇವನ್ನೆಲ್ಲಾ ದೂರಮಾಡುತ್ತದೆ. ಆರೋಗ್ಯಕರವಾದ ಶರೀರವೂ, ಚುರುಕಾದ ಬುದ್ಧಿಯೂ, ನಿಮ್ಮದಾಗುವದು.
ವಾಯುಸಂಚಾರಕ್ಕೆ ಅವಕಾಶ ಕೊಡದ ಒರಟಿಗಳುಳ್ಳ ಶೀಸೆಗಳಲ್ಲಿಯೇ ಮಾರಲ್ಪಡುವುದರಿಂದ ಈನೊಸ್ ತನ್ನ ಉಲ್ಲಾಸವನ್ನು ಶೀಸೆ ತೆರದ ಮೇಲೆ ಕೂಡ ಕಳೆದುಕೊಳ್ಳುವುದಿಲ್ಲ. ಡಬ್ಬಿಗಳಲ್ಲಿ ಮಾರಲ್ಪಡುವುದಿಲ್ಲ.
FRUIT SALT
ENO

NOTICE

In the High Court of Judicature at Madras.

Ordinary Original Civil Jurisdiction.

O. P. No. 38 of 1942.

In the matter of the Indian Companies Act VII of 1913

and

In the matter of the Kalyanpur Sugar Mills Ltd. & Reduced.

The Kalyanpur Sugar Mills Ltd., & Reduced —Petitioner.

Notice is hereby given that a petition was filed in the High Court of Judicature at Madras on the 3rd day of February 1942 for confirming a resolution reducing the paid up capital of the above Company from Rs 150770/–to Rs 75385/–and is directed to be heard before the Judge sitting in Chambers on the 10th day of April 1942

(Sd.) **A. Narayana Pai,**

Advocate for the Company.

Thoms Road, T. Nagar,

Madras, 20–3–1942.

ನ್ಯೂರೆನ್ಸ್
ಡ್

ಇನ್ಯೂರೆನ್ಸ್
ಸವಿಗೆ ಸಂಬಂ
ಸ್ಥಿ ಆಡಿಟ್ ಆದ ಲೆಕ್ಕ
ಾದರದಿಂದ ಸ್ವೀಕರಿ
ಸೋರೆಗೆ ಗತವರ್ಷ
ಗಳ ಮೊತ್ತಕ್ಕೆ
ಳು ಈ ಸಂಸ್ಥೆಗೆ
ಿ ಪ್ರೀಮಿಯಂಗಳ
ಾಯಿಗಳನ್ನು ಕೊಡಲಾ
ಅಂದರೆ ಹಿಂದಿನ ವರ್ಷಕ್ಕಿಂತ
ಪ್ರೀಮಿಯಂಗಳಷ್ಟು ಹೆಚ್ಚಿನ
ಸ ವಿಮಾ ವ್ಯವಹಾರ
ಂಸ್ಥೆ ವರದಿಯ ವರ್ಷ
ಾಡಿತು.

ರ್ಷದ ಪ್ರೀಮಿಯಮ್ ಮೊದ
ಗಳಿಂದ ಉತ್ಪತ್ತಿ ರೂ.
-ಲ-೨. ಖರ್ಚು ಪ್ರೀಮಿ
ಆದಾಯದ ಶ-೯%ರಷ್ಟು
ಅದರ ಖರ್ಚಿನಗಿಂತ ೨-೫%
ಾಯಿತು. ಸಂಸ್ಥೆಯ
ವಿಮಾ ಈ ಬಾರಿ ರೂ.
ಂ ಸೇರಿ, ಆ ನಿಧಿ ಈಗ
೫೦,೯೫೪-೧೧-೯ ಆಯಿ
ಮೇಲಿನ ಬಡ್ಡಿ ದರ ೪%

ಸರಕಾರೀ ಮತ್ತು ಇತರ
ಗಳಲ್ಲಿ ವಿನಿಯೋಗಿಸಿದ ಒಟ್ಟು
ರೂ. ೨,೦೧,೦೦೦; ಇದು ಅವು
ಮೂಲ ಬೆಲೆ; ಈಗಿನ ಅವುಗಳ
ಟ್ ಬೆಲೆ ಇನ್ನೂ ಸುಮಾರು
ಎರದಷ್ಟು ಹೆಚ್ಚಿದೆ.

ಕ್ಲೈಮುಗಳ ಮೊತ್ತವಾದರೂ ಗತ
ವರ್ಷದಲ್ಲಿ ರೂ.೧೬,೧೮೩-೮-೦ರ ಮಿತಿ
ಯಲ್ಲಿಯೇ ಇದೆ ಇದರಲ್ಲಿ ಮರಣ
ದಿಂದ ಉಂಟಾದ ಕ್ಲೈಮುಗಳ ಮೊತ್ತ
ರೂ.೧೩,೬೪೩-೮-೦; "ಮೆಚೂರಿಟಿ"ಯ
ಮೊತ್ತ ರೂ. ೨,೫೪೦.

ವರದಿಯ ವರ್ಷ ಅಂತರ್ ಜನಾಂ
ಗಗಳ ವಿದ್ಯಮಾನಗಳಿಂದ ಕೆಟ್ಟಿದ್ದರೂ,
ಈ ಸಂಸ್ಥೆ ಆ ವರ್ಷದಲ್ಲಿಯೂ
ಇಷ್ಟೊಂದು ಯಶಸ್ವಿಯಾಗಿ ತನ್ನ
ಕಾರ್ಯಭಾರಗಳನ್ನು ಸಾಗಿಸಿತೆಂದು
ನಾವು ಅದನ್ನು ಅಭಿನಂದಿಸದಿರಲಾರೆವು.
ಆ ವರ್ಷ ವಿಮಾ ವ್ಯವಹಾರ ಕೆಚ್ಚಿ,
ಖರ್ಚು ತಗ್ಗಿ, ಶುದ್ಧವಾದ ಒಂದು
ಬೋನಸ್ಸು ಷೀಟನ್ನು ಸಂಸ್ಥೆ ಮುಂದಿರಿ
ಸಲು ಶಕ್ತವಾದುದು ಮರೆಯತಕ್ಕ ವಿಷ
ಯವಲ್ಲ. ಹಾಗೂ ಯುದ್ಧವು ಇಂಡಿ
ಯದ ಬಾಗಿಲಿಗೆ ಬರುತ್ತಿರುವುದರಿಂದ,
ಮುಂದಿನ ಆರ್ಥಿಕ ರಕ್ಷಣೆಯ ಪ್ರಶ್ನೆ
ಇನ್ನಷ್ಟು ಪ್ರಾಮುಖ್ಯತೆ ಪಡೆದಿದೆ
ಎಂಬುದೂ ಅಲ್ಲಗಳೆಯತಕ್ಕುದಲ್ಲ.
ನಾವು ಯಾವ ದೃಷ್ಟಿಯಿಂದ ನೋಡಿ
ದರೂ, ಇನ್ಯೂರೆನ್ಸ್ ಯುದ್ಧದ ಮಧ್ಯ
ದಲ್ಲಿಯೂ ತಲೆ ಎತ್ತಿಕೊಂಡಿದೆ; ಮತ್ತು
ಭವಿಷ್ಯತ್ತಿನ ಸಂಸಾರ ನಿರ್ವಾಹಕ್ಕೆ
ಒದಗಿಸಿ, ರಕ್ಷಣೆಕೊಡುವ ಈ ಮಹ

NOTICE

In the Court of the District Judge of South Kanara

O. P. No. 22 of 1942

In the matter of Guardianship of Person and Property of minor Venkatgiri:—

Padmavathi —PETITIONER.

To all to whom it may concern:—

Take notice that the above named petitioner has presented an application to the above Court praying that she may be appointed as the guardian of the person and property of the above named minor, and for other reliefs, and that the 7th day of April 1942 has been fixed for the hearing of the said application at 10-30 A. M. and that if you desire to oppose the said application or to apply for the appointment of any person other than the said petitioner as guardian of the person and property of the said minor, you should appear on the said day in the said Court in person or by a duly authorised pleader, and urge your objections before the said Court and that in default of your appearance, the said application will be heard and determined in your absence.

S. Venkat Rao
Vakil for Petitioner.

Mangalore, 3-3-1942.

ಯಾವ ಆಲೋಚನಾಪರ ಮನುಷ್ಯನೂ

ತನಗೆ ಅತ್ಯಂತ ಪ್ರಿಯತಮನಾದ ತನ್ನ ಸಂಸಾರ, ತನ್ನ ಮನೆ, ತನ್ನ ಭಾವೀ ಸುರಕ್ಷತೆ ಇವುಗಳು ಈದಿನ ಮನೋಪದ್ರವಕ್ಕೆ ಗುರಿಯಾಗಿವೆಯೆಂಬುದನ್ನು ತಿಳಿಯದಿರನು. ಅಲ್ಲದೆ, ಅವನು ಅಮೂಲ್ಯವಾದ ಪ್ರಾಣವನ್ನೂ ಸ್ವಾತಂತ್ರವನ್ನೂ ಸಂರಕ್ಷಿಸಬಲ್ಲನು. ಅವನು ದೇಶರಕ್ಷಣೆಯ ಕ್ರಮವನ್ನು ಹೆಚ್ಚಿಸುವುದರ ಮೂಲಕ ಹಿಂದೂಸ್ಥಾನದ ಬಲವನ್ನು ವೃದ್ಧಿಪಡಿಸಲು ಸಹಾಯಮಾಡಬಲ್ಲನು—ಆದರೆ—ಆಲಸ್ಯವಿಲ್ಲದೆ ಕಾರ್ಯೋನ್ಮುಖನಾಗಬೇಕು. ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳಲು ಈಗಲೇ ಸುಸಮಯ.

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗೂ ರೂ ೫/೯/- ಲಾಭ ಬರುವುದು

ನೀವು ಕೊಡುವ ಪ್ರತಿಯೊಂದು ಆಣೆಯೂ ಹಿಂದೂಸ್ಥಾನದ ಸೈನಿಕ, ನೌಕ, ವೈಮಾನಿಕ ಬಲವನ್ನು ಹೆಚ್ಚಿಸಿ, ಶತ್ರುಗಳ ದಾಳಿಯನ್ನು ಎದುರಿಸಲು ಹಿಂದೂಸ್ಥಾನವನ್ನು ಬಲಪಡಿಸುತ್ತದೆ.

ಪೂರ್ತಿ ವಿವರಗಳು ಪೋಸ್ಟಾಫೀಸಿನಿಂದ

G.I. 24. KN.

ತ್ತಾದ ಶಕ್ತಿ ಆ ಜೀವ ವಿಮಾ ಪೊಲಿಸಿಯೊಂದರಲ್ಲಿ ಅಡಗಿದೆ. ನೆನಪಿರಲಿ.

ಇನ್ನು ನಮ್ಮ ಜಿಲ್ಲೆಯಿಂದ ವರ್ಷಂ ಪ್ರತಿ ಪ್ರೀಮಿಯಮ್ಮಿನ ರೂಪದಲ್ಲಿ ಹೊರಗಿನ ವಿಮಾ ಕಂಪೆನಿಗಳಿಗೆ ಸುಮಾರು ಕಾಲು ಕೋಟಿ ರೂಪಾಯಿಗಳಿಗೂ ಮಿಕ್ಕಿ ಹರಿದು ಹೋಗುತ್ತಿರುವಾಗ, ಊರಿನ ಕಂಪೆನಿಗಳ ಆರ್ಥಿಕ ವಿಮಾನಗಳು ಹೀಗೇಕಿರಬೇಕೆಂಬುದು ನಮ್ಮ ಜಿಲ್ಲೆಯವರು ತಾವೇ ಆಲೋಚಿಸಿ ನೋಡಬೇಕಾದ ಮುಖ್ಯಾಂಶವಾಗಿದೆ. ಹೇಗೂ ಇಂದು ಅದು ಅಭಿವಮಾನ ಪಡತಕ್ಕ ಮಾತಲ್ಲವಾದರೂ, ಸ್ಥಳೀಯ ಸಂಸ್ಥೆಗೆ ಉತ್ಸಾಹಪೂರ್ಣವಾದ ಬೆಂಬಲ ನೀಡಿ, ಅವನ್ನು ಹೆಮ್ಮೆ ಪಡುವಂತಹ ಆದರ್ಶ ಸಂಸ್ಥೆಗಳಾಗಿ ಮಾರ್ಪಡಿಸುವಲ್ಲಿ, ಇನ್ನಾದರೂ ನಮ್ಮ ಜಿಲ್ಲೆಯವರೂ, ಸಮಗ್ರ ಕನ್ನಡಿಗರೂ ಶುದ್ಧಾಂತಃಕರಣದಿಂದ ಮುಂದೆ ಬರುವರೆಂಬ ನಂಬಿಕೆ ನಮಗಿದ್ದೇ ಇದೆ.

೧೨ ವರ್ಷ ತುಂಬಿದ ಈ ಸಂಸ್ಥೆಯು, ಮುಂದಿನ ವರ್ಷ ಇಮ್ಮಡಿಯ, ಮುಮ್ಮಡಿಯ ವೃದ್ಧಿಗತಿಯನ್ನು ತೋರಲೆಂದು ಹಾರೈಕೆ!

ಸರ್ ಎಸ್. ಕ್ರಿಪ್ಸರ ಭೇಟಿಗಾಗಿ

ಸರ್ ಕ್ರಿಪ್ಸರ ಭೇಟಿಗಾಗಿ ಶ್ರೀ ಸಾವರಕಾರ್, ಶ್ರೀ ಎನ್. ಜೋಶಿ, ಮಿ। ಜಿನ್ನಾ, ರ್ಯಾ॥ ಬಾ॥ ಕರ್, ಡಾ। ಅಂಬೇಡ್ಕರ್, ಶ್ರೀ ಸಿ. ರಾಜ ಅವರಿಗೆಲ್ಲ ಆಮಂತ್ರಣ ಹೋಗಿವೆ.

ರಣರಂಗದ ವಾರ್ತೆ

ಜಪಾನರು ಮಾರ್ಸ್‌ಬೀ ಒಂ
ಡಾರ್ವಿನ್‌ಗಳ ಮೇಲೂ, ಆಸ್ಟ್ರೇಲಿ
ವರು ರಾಬೌಲಿನ ವೈಖರಿಯ
ದಾಳಿ ನಡೆಸಿದ್ದಾರೆ. ಈ ಪ
ಡಿಯಿಂದ ಓಂ
ನಿನ ಜಪಾನರ
ನಡೆದಿದೆ.

ಜಪಾನಿನ ಯತ್ನವೇ?

ಜಪಾನು ಮೌ॥ ಚಾಂಗ್ ಕೈ ಶೇಕರ ಸರಕಾರವನ್ನು ಮನ್ನಿಸಿಯೂ, ಚೀನದ ಕೆಲ ಬಂದರಗಳ ಹೊರತಾಗಿ ತಮ್ಮ ವಶವಾದ ಉಳಿದ ಪ್ರಾಂತಗಳನ್ನು ಚೀನರಿಗೆ ಹಿಂದೆ ಕೊಟ್ಟೂ, ಚೀನದ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಿಯೂ, ರಂಗೂನಿನಲ್ಲಿ ಚೀನಿಯರಿಗೆ ಕೆಲ ಭಾಗಗಳನ್ನು ಹೊಸದು ಸಮರ್ಪಿಸಿಯೂ ಚೀನಾದೊಡನೆ ಸಂಧಿ ಮಾಡಿಕೊಳ್ಳಬಹುದಾದ ಒಂದು ವಾರ್ತೆ ಲಂಡನಿಗೆ ತಲುಪಿದೆ.

ಶಾರ್ಕ್ ಲಿವರ್ ಆಯಿಲ್

(ಮದ್ರಾಸ್ ಬ್ರಾಂಡ್)

ಸರ್ವಸಾಧಾರಣ ಕಾಡ್ ಲಿವರ್ ಎಣ್ಣೆಯಲ್ಲಿರುವ ಎರಡರಷ್ಟು ವಿಟಮಿನ್ A ಮತ್ತು ವಿಟಮಿನ್ D ಇದರಲ್ಲಿ ಒಳಗೊಂಡಿರುವುದು ಖ ಶ್ರೀ.

ತ್ರಾಣಗುಂದಿಸುವ ವ್ಯಾಧಿಗಳಿಗೆ ಬಹಳ ಗುಣಕಾರಿಯಾಗಿದೆ!

SHARK LIVER OIL
(MADRAS BRAND)

— ದೌರ್ಬಲ್ಯವನ್ನು ದೂರೀಕರಿಸುತ್ತದೆ —

ಚಿಕ್ಕವರಲ್ಲೂ ಹಳಬರಲ್ಲೂ, ಆರೋಗ್ಯ ಹಾಗೂ ಶಕ್ತಿ ವರ್ಧಿಸುತ್ತದೆ!

— ಕೃತ್ರಿಮ ನಕಲನ್ನು ನಿರಾಕರಿಸಿರಿ —

ಏಜಂಟರು: ಮೆಸರ್ಸ್ ಪೇರಿ & ಕೊ., ಲಿಮಿಟೆಡ್, ಮದ್ರಾಸು.
(ಮದ್ರಾಸು ಸಂಸ್ಥಾನ ಮತ್ತು ಹೈದರಾಬಾದು, ಮೈಸೂರು, ತಿರುವಾಂಕೂರು, ಕೊಚ್ಚಿನ್, ಪುದುಕೋಟೆ ಮತ್ತು ಸಾಂಡೂರು ಸಂಸ್ಥಾನಗಳಿಗೆ)

ಗವರ್ನಮೆಂಟ್ ಆಯಿಲ್ ಫೇಕ್ಟರಿ, ಕಲ್ಲಿಕೋಟೆ.

ತಾರುಣ್ಯ
ವನ್ನುಳಿಸಿಕೊಂಡು
ಮನಮುಗ್ಧ
ರಾಗಿರಬಾರದೇಕ

ಸೌಂದಯ ಶುಚರ್ಮದ ಕಾಂತಿಗಿಂತಲೂ ಆಳವಾದುದಿದೆ. ಆ ಶುಭ್ರ ಕಣ್ಣುಗಳು, ರಮಣೀಯ ಸ್ವಚ್ಛ ಅಂಗಕಾಂತಿ ಹಾಗು ಉಲ್ಲಾಸ ಮನೋವೃತ್ತಿ, ಇವೆಲ್ಲಾ ಅಂತರಾರೋಗ್ಯದಿಂದ ಉಂಟಾಗುವುವು; ಈ ಅಂತರಾರೋಗ್ಯದ ರಹಸ್ಯ ಬೈಲ್ ಬೀನ್ಸ್‌ಗಳಲ್ಲಿದೆ.

ಇದುಕಾರಣ ರಮಣೀಯ, ಆಕರ್ಷಕ ದೇಹಾಕೃತಿ, ಮನಮುಗ್ಧ ಅಂಗಕಾಂತಿ ಪಡೆಯಬೇಕಾದರೆ ಮತ್ತು ಯಾವಾಗಲೂ ಉಲ್ಲಾಸವಾಗಿ, ಆರೋಗ್ಯವಾಗಿರಬೇಕಾದರೆ ಪ್ರತಿ ರಾತ್ರಿಯೂ ಎರಡು ಬೈಲ್ ಬೀನ್ಸ್ ಸೇವಿಸುವ ಅಮೂಲ್ಯ ಸೂತ್ರವನ್ನು ನುಸರಿಸಲು ಮರೆಯದಿರಿ.

ಪ್ರತಿದಿನವೂ 1,000,000ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತಿದೆ. ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸ್‌ಗಳನ್ನು ಸ್ಟಾಕ್ ಮಾಡುತ್ತಾರೆ. ಬಾಟ್ಲಿ ಒಂದರ ಬೆಲೆ ರೂಪಾಯಿ ಒಂದು. ಉದಾರ ಉಚಿತ ನಮೂನೆಗಾಗಿ ಬರಕೊಳ್ಳಿ. ಅಂಚೆವೆಚ್ಚಕ್ಕಾಗಿ ಒಂದಾಣೆ ಚೀಟಿ ಕಳಿಸಿರಿ. ಏಜಂಟರು: ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ., ಮದ್ರಾಸು.

ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ಸಸ್ಯ ಸಾರಗಳಿಂದ ತಯಾರಿಸಿದ್ದಾಗಿವೆ; ಅದುಕಾರಣ ಪೂರ್ಣ ವಿಶ್ವಾಸದಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಅಂಗರಚನೆಯನ್ನು ಚೇತನಗೊಳಿಸಿ, ರಕ್ತವನ್ನು ಶುದ್ಧಮಾಡಿ, ಕೊಬ್ಬುಂಟಾಗುವ ಮಲಪದಾರ್ಥವನ್ನು ದಿನವೂ ಹೊಂಗೆಡಹುವುವು; ಹಾಗೆ, ನಿಮ್ಮ ಅಂತರಾರೋಗ್ಯವು ನಿಶ್ಚಿತಗೊಂಡು ನೀವು ಮನೋಹರ ಮತ್ತು ಚಿತ್ತಾಕರ್ಷಕವಾಗಿ ಸಪುರ ಆಗುವಿರಿ.

BILE BEANS

ಬೈಲ್ ಬೀನ್ಸ್‌ನಿಮ್ಮಪ್ಪಾಯಕ್ಕೆ ಹೆಲವು ವರ್ಷ ಕೆಡಿಮೆ ಕಾಣುವಂತೆ ಮಾಡುವುವು

ರ್ ಸ್ಟಾಫರ್ಡ್ ಕ್ರಿಪ್ಸ್‌ರಿಗೆ ಸುಸ್ವಾಗತ

ೀ ಪುಟದಿಂದ ಮುಂದುವರಿದುದು)

ಸದ್ಯ ಭಾರತಕ್ಕೆ ಉಂಟಾಗಿರುವ ಾಯಗಳ ಕುರಿತು ಯಾರ ಉಪದೇ ನಮಗೆ ಅಗತ್ಯವಿಲ್ಲ; ನಮಗೆ ಸದ್ಯ —ಏಕ್ಸಿಸ್ ರಾಷ್ಟ್ರ ಹಾಗೆ, ರಷ್ಯ— ನಿಲ್ಲುವಂತೆ ಬ್ರಿಟನ್— ಸಂಧಿಸಬಲ್ಲ ಉಭಯಸಾಮಾ ಒಂದು ಮೈತ್ರಿಯ ಕ್ಷೇತ್ರವು ನಿರ್ಮಾಣವಾಗ ಬೇಕೆಂದಷ್ಟೇ ಅಲ್ಲ; ಈಗಿನ ಯುದ್ಧಕ್ಕೂ ಜಗತ್ತಿನ ಧ್ವಂಸಕಾರ್ಯಕ್ಕೂ ಕಾರಣ ಭೂತವಾದ ಆ ಸಮಾಜಿಕ ಜೀವನದ ಕೆಡುಕುಗಳನ್ನೆಲ್ಲಾ ನಿರ್ಮೂಲಿಸಿ, ಹೊಸ ಜಗತ್ತಿನ ಸೃಷ್ಟಿಯೂ ಆಗಬೇಕು. ಸರ್ ಕ್ರಿಪ್ಸ್ ಪ್ರದರ್ಶನದ ಕುರಿತಾದ ಪ್ರಭುತ್ವದವರ ಆ ಪ್ರಕಟಣೆಯಲ್ಲಿ, ಈ ಮುಖ್ಯಾಂಶಗಳ ವಿಚಾರದ ಯಾವ ಪ್ರಸ್ತಾವವೂ ಇಲ್ಲ!

ಆದರೂ, ಸರ್ ಕ್ರಿಪ್ಸ್‌ರು, ತಮಗೆ ಸಾಧ್ಯವಿರುವ ಮಟ್ಟಿಗೆ, ಸಂದರ್ಭಗಳನ್ನು ನೋಡಿಕೊಂಡು ವರ್ತಿಸದಿರಬೇಕೆಂದು ನಮ್ಮ ದೃಢ ವಿಶ್ವಾಸ. ಮುಕ್ತವಾಗಿ, ವೈಸರಾಯರ ಆ ಅಗೋಸ್ತು ಪ್ರಕಟಣೆ ಅವಧಿ ದಾಟಿದ ದಾಖಲೆಯೆಂದಾಗಬೇಕು; ಪಾರ್ಲಿಮೆಂಟಿನ ಅನಂತಾಧಿಕಾರದ ಸೂತ್ರಗಳಿರಬಾರದು; "ಬಿಳಿ ಮನುಷ್ಯನ ಭಾರವಾದ ಜವಾಬುದಾರಿಯ ಹೊರೆ" ಎಂಬ ಮಾತು ನಿಲ್ಲಬೇಕು; ಸಾಮ್ರಾಜ್ಯದ ಹಿತಾಸಕ್ತಿಯ ಚರ್ಚೆ ಎದುರಿಗಿರಬಾರದು. ಒಟ್ಟಿನಲ್ಲಿ, "ಮಿಲಿಟರಿ, ಯುದ್ಧ ಸಾಮಗ್ರಿಗಳ ಸರಬರಾಯಿ" ಮೊದಲಾದುವುಗಳಿಗಿಂತಲೂ ಹೆಚ್ಚಾಗಿ, ಇಲ್ಲಿನ ಜನರು ತಾವು, ತಮ್ಮ ದೇಶ, ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿಯೇ, ಬ್ರಿಟಿಶ ರೊಂದಿಗೆ ಕಲೆತು ಯುದ್ಧ ಮಾಡುವೆವೆಂದೇ ತಿಳಿಯುವಂತಾಗಬೇಕು. ವೈಸರಾಯರ ಅಗೋಸ್ತು ಪ್ರಕಟಣೆಯಲ್ಲಿ, ಆ ಸ್ಫೂರ್ತಿಯನ್ನು ಉಂಟು ಮಾಡುವ ಅಂಶಗಳಿಲ್ಲ. ಆದುದರಿಂದ ಸರ್ ಕ್ರಿಪ್ಸ್‌ರು, ಆ ಸ್ಫೂರ್ತಿ ಇಲ್ಲಿ ನೆಲಸಿ ನಲಿದಾಡುವಂತೆ ಮಾಡುವ ಸಾಧನಗಳನ್ನೇ ಇಲ್ಲಿಗೆ ತರುವರೆಂದು ಹಾರೈಸೋಣ; ಹಾಗೆ ಅವರ ರಾಯಭಾರವಿಲ್ಲಿ ಸಾರ್ಥಕವಾಗಲೆಂದು ನಿರೀಕ್ಷಿಸಿ, ದೂರದಿಂದ ಬರುವ ಆ ಮಹನೀಯರಿಗೆ ಸುಖಾಗಮನವನ್ನೂ ಸುಸ್ವಾಗತವನ್ನೂ ಬಯಸೋಣ!

ಮೂಲ್ಕಿ

ಸ್ಥಳೀಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಮಹೋತ್ಸವವು ಈ ಕೆಳಗಿನಂತೆ ಜರಗಲಿರುವುದು. ತಾ. ೩೧-೩-೪೨ ಧ್ವಜಾರೋಹಣ, ತಾ. ೧-೪-೪೨ ಅಯನೋತ್ಸವ, ತಾ. ೨. ಪೇಟೆ ಸವಾರಿ, ತಾ. ೩. ಕೊಪ್ಪಲ ಸವಾರಿ, ತಾ. ೪. ಬಾಕಿಮಾರು ದೀಪ, ತಾ. ೫. ಕರೆದೀಪ, ತಾ. ೬. ರಥಾರೋಹಣ, ತಾ. ೭. ರಥೋತ್ಸವ ಮತ್ತು ಅವಭೃತ.

ಸ್ಥಳಿಕ ಶ್ರೀ ವೆಂಕಟ್ರಮಣ ದೇವಳದಲ್ಲಿ ಜರಗತಕ್ಕ ವರ್ಷಾವಧಿ ರಥೋತ್ಸವವು ಇದೇ ಬರುವ ತಾ. ೨೬-೩-೪೨ನೇ ಗುರುವಾರ ಶ್ರೀ ರಾಮನವಮಿ ದಿನ ಜರಗಲಿರುವುದು.

ಮದ್ರಾಸು ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯ ಮಾಡಿದವರ ಹೆಸರಿನ ಪಟ್ಟಿ.

ಭಾಗ ೨

105—0—0

ಸಿ. ಎಲ್. ಲೋಬೊ; ಇಜ್ಲಂಪಾಡಿ ಮನೆ; ಮಂಜೇಶ್ವರ ಫಿರ್ಕಾ ಗ್ರಾಮ ಉದ್ಯೋಗಸ್ಥರು; ಎಸ್. ಮರಿಯಾಂ ಬೀಬಿ ಶಮ್ಮಾಡ್.

101—0—0

ಚಂದ್ರಾಣಾ ಬ್ರದರ್ಸ್; ಅಬ್ದುಲ್ಲಾ ರಹಿಮಾನ್; ತಳಂಗೆರೆ ಮುಮ್ಮುಂಜಿ; ಪಿ. ಮೊಯಿದಿನ್ ಕುಂಜಿ; ಕಲ್ಯಾಡ್ ಮುಸ್ಲಿಮರು; ಸಿ. ಕುಂಜಿ ರಾಮನ್ ನಾಯರ್; ವಾಸುದೇವ ಶಿಸ್ಯ; ಕೆ. ಚಿಕ್ಕಪ್ಪ ರೈ; ಬಿ. ಸುಬ್ಬಣ್ಣ ಆಳ್ವ; ಡಾ ಕೆ. ಸಿ. ರಾಘವೇಂದ್ರ ರಾವ್; ಕೆ. ನರಸಿಂಗ ನಾಯಕ್; ಟಿ. ಸಿ. ಕೇರಳ ವರ್ಮರಾಜಾ; ಕುಂಬಳೆ ಫಿರ್ಕಾ ಗ್ರಾಮ ಉದ್ಯೋಗಸ್ಥರು; ಹೊಸದುರ್ಗ ಫಿರ್ಕಾ ಗ್ರಾಮ ಉದ್ಯೋಗಸ್ಥರು; ನಿಲೇಶ್ವರ ಫಿರ್ಕಾ ಗ್ರಾಮ ಉದ್ಯೋಗಸ್ಥರು.

100—0—0

ಮಂಗಳೂರಿನ ಬಿಶೋಪರು; ಗವರ್ನ್‌ಮೆಂಟ್ ಟ್ರೇಡ್ಸ್ ಸ್ಕೂಲಿನ ಶಿಬಂದಿ ಮತ್ತು ವಿ
ಕೃಷ್ಣಯ್ಯ
ಯು. ಎಸ್
ಕೆ. ಸಿ. ಮಹಮ್ಮದ್
ಕುಟ್ಟಿ ಆಲಿ ಹಾ
ಪಿ. ಕುಂಜಿ ಮಮ
ಕುಂಜಿ ಹಾಜಿ;
ಕೃಷ್ಣ ಮಲ್ಯ; ಕ
ಭಾಗ; ಎಂ.
ರಾಮನ್ ಗುರಿಕ್ಕಿ
ರಾಮ ನಾಯರ್; ಕೃಷ್ಣ ಭಟ್ಟ
ಕಡಂಬಳಿತ್ತಾಯ; ರಾವ್
ಎಸ್. ರಾಮಯ್ಯ ಆಳ್ವ; ಕಾಳ
ಕಿಜೂರು, ಅಜಾನೂರು
ಗಾಡ, ನಿಲೇಶ್ವರ, ಫಿ
ಕೋ-ಓಪರೇಟಿವ್ ಸೊಸೈ
ನೆಕ್ರಾಜೆ ಗ್ರಾಮ ಉದ್ಯೋ
ತಿರುವಾಗಿಲು ,,
ಕಾಸ್ರಗೋಡು ,,
ತಳಂಗೆರೆ ,,
ಜಂಗಳ ,,
ಬಾಸೆಲ್ ಮಿಶನ್

ಜೀರ್ಣೇಂದ್ರಿಯ ಮತ್ತೊಂದಿಗಳು ಚೈತನ್ಯ ಕಡಮೆಗೊಳಿಸಿ

ಆಹಾರವು ಸರಿಯಾಗಿ ಜೀರ್ಣವಾಗದಿದ್ದರೆ ನಿಮಗೆ ಅವಶ್ಯಕವಾದ ಶಕ್ತಿಯನ್ನೂ ಅದು ಕೊಡಲಾರದು. ಜೀರ್ಣಶಕ್ತಿಯ ಚಿಹ್ನೆಗಳೆಂದರೆ—ಹುಳಿತ ವೇದನೆ, ಪಿತ್ತಸಂಕಟ, ವಾಯು ತೊಂದರೆ ಮಲಬದ್ಧತೆ. ಅವು ದುರ್ಬಲ ಜೀರ್ಣಶಕ್ತಿಯ ನಿಜವಾದ ಕಾರಣವನ್ನು ತೋರಿಸುತ್ತಿರುವ ಹೊಟ್ಟೆಯಲ್ಲಿ ಅಧಿಕವಾಗಿರುವ ಆಮ್ಲ.

ನಿಮಗೆ ಅವಶ್ಯಕವಾದ ಶಕ್ತಿಯನ್ನೆಲ್ಲಾ ಜೀರ್ಣಶಕ್ತಿಯು ನಿಮಗೆ ಒದಗಿಸುತ್ತಿದೆ ದೃಢಪಡಿಸಲೋಸುಗವಾಗಿ ದುರ್ಬಲ ಜೀರ್ಣಶಕ್ತಿಯ ಪ್ರಥಮ ಚಿಹ್ನೆ ತೋರಿದೊಡನೆಯೇ ಎರಡು ಚಾಚಮ್ಚಗಳಷ್ಟು ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಸೇವಿಸಿ ಯಾ ಎರಡು ಫಿಲ್ಲಿಪ್ಸ್ ಬಿಲ್ಲೆಗಳನ್ನು ಸೇವಿಸಿ, ಬೇಗನೆ ದುರ್ಬಲ ಜೀರ್ಣಶಕ್ತಿಯ ಚಿಹ್ನೆಗಳು ಮಾಯವಾಗುತ್ತವೆ. ಏಕೆಂದರೆ, ಫಿಲ್ಲಿಪ್ಸ್ ಅವುಗಳ ಕಾರಣವಾದ—ಹೊಟ್ಟೆಯಲ್ಲಿನ ಅಧಿಕ ಆಮ್ಲರಸವನ್ನು ನಿವಾರಿಸುತ್ತದೆ. ಒಡನೆಯೇ ನಿಮ್ಮ ಹೊಟ್ಟೆಯು ಆಹಾರವನ್ನು ಸಮರ್ಥರೀತಿಯಲ್ಲಿ ಜೀರ್ಣಪಡಿಸುವದರೊಡನೆ ನಿಮಗೆ ಯಥೇಷ್ಟ ಶಕ್ತಿಯನ್ನೂ ಚೈತನ್ಯವನ್ನೂ ಒದಗಿಸುತ್ತದೆ

ಮತ್ತು ಫಿಲ್ಲಿಪ್ಸ್‌ನಲ್ಲಿ ಮೃದುವಾದ ಹಾಗೂ ಪರಿಣಾಮಕಾರಿಯಾದ ಭೇದಿ ಸಾಮರ್ಥ್ಯವಿರುವ ದರಿಂದಾಗಿ ಅದು ಬೇಗನೇ ನಿಮ್ಮ ಪ್ರಕೃತಿಯಿಂದ ವಿಷಮಯವಾದ, ಶಕ್ತಿ ಕುಂದಿಸುವ ಕಶ್ಮಲ ಪದಾರ್ಥಗಳನ್ನು ಹೊರ ಹಾಕುತ್ತದೆ.

ದ್ರಾವಕರೂಪದಲ್ಲಿ ಮನೆವಾರ್ತೆಯ ಉಪಯೋಗಕ್ಕಾಗಿಯೂ ಯಾ ನಿಮ್ಮ ಜೇಬಿನಲ್ಲಿರಿಸುವದಕ್ಕಾಗಿ ಅನುಕೂಲವಾದ ಬಿಲ್ಲೆಗಳ ರೂಪದಲ್ಲಿಯೂ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಎಲ್ಲಾ ಒಳ್ಳೇ ಔಷಧ ಶಾಪುಗಳಲ್ಲೂ ದೊಡ್ಡ ಅಂಗಡಿಗಳಲ್ಲೂ ಸಿಗುತ್ತದೆ. M35V

ನಿಮಗೆ ಬೇಕಾಗುವ ಎಲ್ಲಾ ತೆರನ ರಬ್ಬರ್ ಸ್ಟ್ಯಾಂಪ್
ಮೊನೋಗ್ರಾಮ್ ಮೊಹರುಗಳು,
ಪೇದೆಗಳ ಬೇಜ್, ಬೆಲ್ಟ್, ತರವಾರಿ ಸೈನ್ ಬೋರ್ಡ್ ಇತ್ಯಾದಿಗಳಿಗೆ
ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,
(ಸ್ಥಾಪನೆ: 1926)
A 17, ಬಲ್ಮಠ ರಸ್ತೆ ಮಂಗಳೂರು.
(ಮೈಸೂರು ಸರಕಾರದ ಸ್ಟೋರ್ಸ್ ಪರ್ಚೇಸ್ ಕಮಿಟಿಯ ಅಧಿಕೃತ ಲಿಸ್ಟಿನಲ್ಲಿ ಸೇರಿಸಲ್ಪಟ್ಟಿದೆ)

ನ ಸಭಾ

ರಿದುದು)

ನ್ನು ಜಗ

ನ ಒಬ್ಬರು

ಯ್ಯನ ಕಿವಿ ನೆಟ್ಟ

ಹಕ್ಕಿನ ಸ್ಥಾನ-

ಬೇಕೆಂದು ಅವ

ವರಿಗೆ ಸಿಕ್ಕಲಿಲ್ಲ.

ಮುಂದೆ ಬಂತು.

ವರೊಡನೆ ಆ

ಸೂಚಿಸಿದೆಂದು

ಟ್ಟಿದ್ದೆರೋ, ಏನೋ!

ನ್ನಾಥಯ್ಯ ಅಂದಿನ ಸಭಾಧ್ಯಕ್ಷ

ಪಕ್ಷಗಾನ ಸಭೆಗೆ ಹೆಸರೇನು

ಕೇಳಿದರು. "ಶ್ರೀ ರಾಮ

ರಾಮಯ್ಯನೂ, "ಶ್ರೀ

ಸಭೆ" ಎಂದು ನಾರ

"ಶ್ರೀ ಸರಸ ಸಭೆ" ಎಂದು

ನೂ ಸೂಚಿಸಲು, "ಶ್ರೀ

ಜಗನ್ನಾಥ ಸಭೆ" ಎಂಬುದೇ ಚೆನ್ನಾಗಿ ದ್ದೀತೆಂದು, ಜಗನ್ನಾಥಯ್ಯನವರೊಡನೆ ಬಂದವರಾಡಿದರು. ಕೊನೆಗೆ ಅದು ಯಾವುದೂ ಬೇಡವೆಂತಲೂ, ಅರ್ಥಗಾರರ ಹೆಸರಿನ ಒಂದೊಂದು ಅಕ್ಷರವನ್ನು ತರಿಸಿ, ಅವನ್ನು ಒಟ್ಟಿಗೆ ಜೋಡಿಸಿದ ಶಬ್ದವೇ ಈ ಸಭೆಯ ನಾಮಕರಣವಾಗಲೆಂದೂ ಬುದ್ಧಿವಂತ ಮುದುಕರೊಬ್ಬರು–ಶಾಸ್ತ್ರಿಗಳು--ಸೂಚಿಸಿದರು. ಅದು ಎಲ್ಲರಿಗೂ ಒಪ್ಪಿಗೆಯಾಯಿತು. ಸಭೆಗೆ "ರಾಣನಗಟ್ಟ ಸಭಾ" ಎಂಬ ಹೆಸರಿಟ್ಟಿತು. ಅಂದರೆ, ರಾಮಯ್ಯನಿಂದ "ರಾ", ನಾರಣಪ್ಪನಿಂದ "ಣ", ನರಸಪ್ಪಯ್ಯನಿಂದ "ನ", ಜಗನ್ನಾಥಯ್ಯನಿಂದ "ಗ", ಪುಟ್ಟನಿಂದ "ಟ್ಟ" ಅಕ್ಷರಗಳನ್ನೆತ್ತಿ ಈ ದಿವ್ಯ ನಾಮಕರಣ

ಇನ್ನು ಪ್ರಥಮ ತಾಳ ಮದ್ದಳೆಯ ಸಮಾರಂಭ; ಮೊದಲು ಅವರವರಿಗೆ ಚೆನ್ನಾಗಿ ತಿಳಿದ ಪ್ರಸಂಗಗಳ ಹೆಸರು

ಇಂದ್ರಿಯ ಸ್ವಾಧೀನ ಪಡೆಯಲು

ಮುಹಾಂಬ್ಸ್ ನೈಟ್ ಪಿಲ್ಸ್"ನ್ನೇ ಉಪಯೋಗಿಸಿರಿ.

"ಡಾ॥ ಮಹಾಂಬ್ಸ್ ನೈಟ್ ಪಿಲ್ಸ್" ಪುರುಷತ್ವವನ್ನು ಹೆಚ್ಚಿಸುವ ಮತ್ತು ಮೂತ್ರ ಜನಕಾಂಗ ಸಂಬಂಧವಾದ ಎಲ್ಲಾ ರೋಗಗಳನ್ನೂ ವಾಸಿಮಾಡುವ ಅದ್ಭುತ ಗುಣಗಳನ್ನು ಪಡೆದಿವೆ. ಮೂಲಿಕೆಗಳಿಂದ ತಯಾರಿಸಲ್ಪಟ್ಟ ಈ ಉಪಯುಕ್ತ ಔಷಧಿಯ ಬಗ್ಗೆ ಹೆಚ್ಚಾಗಿ ವಿವರಿಸುವುದು ಅನವಶ್ಯಕ. ಈ ಔಷಧಿಯ ಚಿಕಿತ್ಸೆಯಿಂದ ಕೇವಲ ಒಂದು ಅಂಗ ಮಾತ್ರವಲ್ಲದೆ ಆ ಅಂಗಕ್ಕೆ ಸಂಬಂಧಿಸಿದ ಪೂರ್ಣ ಅಂಗಾಂಗಗಳನ್ನೆಲ್ಲಾ ಶಾಶ್ವತವಾಗಿ ಗುಣಪಡಿಸುತ್ತದೆ. ಈ ಗುಳಿಗೆಗಳ ಒಂದು ಪೆಟ್ಟಿಗೆ ಹತ್ತು ಬಾರಿ ತೆಗೆದುಕೊಳ್ಳುವಷ್ಟು ಔಷಧಿ ಉಳ್ಳದ್ದಾಗಿ ಸಂಪೂರ್ಣ ಯೌವನ ಸಂಪಾದಿಸಿಕೊಡುತ್ತದೆ. ಕೆಲವು ಸಂದರ್ಭಗಳಲ್ಲಿ ಒಂದೇ ಒಂದು ಡೋಸಿನಷ್ಟು ಈ ಔಷಧಿ ವಯಸ್ಸಿನ ಗಣನೆಯಿಲ್ಲದೆ ಅದ್ಭುತ ಗುಣ ತೋರಿಸಿಕೊಡುತ್ತದೆ. ಇಂದೇ ನೀವು "ಡಾ॥ ಮಹಾಂಬ್ಸ್ ನೈಟ್ ಪಿಲ್ಸ್"ಗಳನ್ನು ಉಪಯೋಗಿಸಿರಿ. ಆಗ ನೀವು ಯೌವನದಲ್ಲಿ ಪಡೆದ ವೈವಾಹಿಕ ಜೀವನ ಸುಖದಷ್ಟೆ ಮನಃತೃಪ್ತಿಯಾಗಿ ಆನಂದ ಪಡೆಯುವುದು ನಿಮಗೆ ಗೋಚರವಾಗುತ್ತದೆ. ಬೆಲೆ ೧ ಪೆಟ್ಟಿಗೆಗೆ ೫ ರೂ. ಅಂಚೆ ದರ ೯ ಆಣೆ, ಅಲಾಯಿದ ಎಲ್ಲಾ ಕೆಮಿಸ್ಟ್‌ಗಳಲ್ಲಿಯೂ ದೊರೆಯುತ್ತೆ.

ಏಜೆಂಟರು: ಅಪ್ಪಾ ಅಂಡ್ ಕೊ,

ಅಪ್ಪಾ ಬಿಲ್ಡಿಂಗ್ಸ್, ಚೈನಾಬಜಾರ್, ಮದ್ರಾಸ್,

ಮಕ್ಕಳಿಗೆ ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ. ಇದು ಮಧುರವಾಗಿದೆ.

ಅವರವರು ಸೂಚಿಸಿದರು. ಕೊನೆಗೆ ಜಗನ್ನಾಥಯ್ಯನ ಒತ್ತಾಯದಿಂದ "ವಾಲಿ ಸುಗ್ರೀವ ಕಾಳಗ" ವೆಂದಾಯಿತು. ಪಾತ್ರಗಳ ಹಂಚಿಕೆಯಲ್ಲಿ, ಜಗನ್ನಾಥಯ್ಯ ವಾಲಿ ಅರ್ಥವನ್ನು ತಾವು ಉಳಿಸಿಕೊಂಡು, ಎಕ್ಕ ಪಾತ್ರಗಳ ಅರ್ಥವನ್ನು ಇತರರಿಗೆ ಹಂಚಿಕೊಟ್ಟರು. ವಾಲಿ ಅರ್ಥ ಹೇಳಲು ತಾನೇ ಯೋಗ್ಯನೆಂದು ತಿಳಿದಿದ್ದ ನರಸಪ್ಪಯ್ಯ, ಇದರಿಂದ ಅಸಮಾಧಾನಗೊಂಡು, "ಹಾಗಾದರೆ ವಾಲಿ ಬೀಳುವವರೆಗೆ ನೀವು ಅರ್ಥ ಹೇಳಿ; ಬಿದ್ದ ಮೇಲೆ ಆ ಅರ್ಥ ನನಗೆ ಬಿಡಿ" ಎಂದರು. ಜಗನ್ನಾಥಯ್ಯ, ನಿರುಪಾಯರಾಗಿ ಅದಕ್ಕೆ ಒಪ್ಪಿದರೂ, ಬೆಳಗಾಗುವವರೆಗೂ ವಾಲಿ ಬಿದ್ದನೆಂದಾಗದಂತೆ, ಅಷ್ಟು ದೀರ್ಘವಾಗಿಯೂ ಅರ್ಥ ಹೇಳಬೇಕೆಂದೇ ಅಥವಾ ನಡುವೆ ಜಗಳ ಮಾಡಬೇಕೆಂದೇ ಒಳಗಿಂದೊಳಗೆ ನಿರ್ಧರಿಸಿದರು.

ಜಗನ್ನಾಥಯ್ಯನಲ್ಲಿಗೆ ಅತಿಥಿಗಳಾಗಿ ಬಂದಿದ್ದ ಅವರ ನೆಂಟರಲ್ಲಿ ಇಬ್ಬರನ್ನು, ಹಂಗಾಮಿಯಾಗಿ ಇಂದಿನ ಮಟ್ಟಿಗೆ ಪದಕ್ಕೂ, ಮದ್ದಳೆಗೂ ಕುಳ್ಳಿರಿಸಿದುದಾಯಿತು. ಜಗನ್ನಾಥಯ್ಯ ವಾಲಿ; ನರಸಪ್ಪಯ್ಯ ರಾಮ; ಸರಿ; ಪ್ರಸಂಗ ಆರಂಭವಾಗಿ, ಜಗನ್ನಾಥಯ್ಯನ ಕಿವಿಮಾತಿನಂತೆ ಮಿಕ್ಕ ಪದಗಳನ್ನೆಲ್ಲ ಹಾರಿಸಿತೆಗೆದು, ವಾಲೀ ಮಾತಿಗೇ ಶುರುವಾಯಿತು. ಒಂದೊಂದು ಪದಕ್ಕೂ ಜಗನ್ನಾಥಯ್ಯ ಹೇಳಿದ್ದನ್ನೇ ತಿರುಗಿ ತಿರುಗಿ ಒಂದೊಂದು ಗಂಟೆ ಅರ್ಥ ಹೇಳುತ್ತ ಬಂದರು. ಅಷ್ಟರಲ್ಲಿ ಜಗನ್ನಾಥಯ್ಯ, ನರಸಪ್ಪಯ್ಯನನ್ನು 'ಕೆಣಕಿ 'ಗ್ರಾಮದಲ್ಲಿರುವಂಥಾ ಶ್ಯಾನುಭಾಗರು, ಕುಟುಂಬದ ಅಣ್ಣ ತಮ್ಮಂದಿರಲ್ಲಿ ಜಗಳ ತಂದು ಹಾಕಿದರೆ, ಅದರಿಂದ ಆಸ್ತಿ ಪಾಲುಪಟ್ಟಿಗೋ, ಕೋರ್ಟಿನ ವ್ಯಾಜ್ಯಕ್ಕೋ ಹೇತುವಾಗಿ, ಅದರಿಂದ ಶ್ಯಾನುಭಾಗನಿಗೆ ಯಾವ ರೀತಿಯಲ್ಲಿ ದುಡ್ಡು ತಿನ್ನಲಿಕ್ಕೆ ಆಗುತ್ತದೋ ತದ್ರೀತಿ ನಮ್ಮ ಅಣ್ಣತಮ್ಮಂದಿರ ಒಳಗಿನ ಝಗಳವನ್ನು ಹೆಚ್ಚಿಸಲಿಕ್ಕೂ ನೀನು ಇಲ್ಲಿಗೆ ಬಂದಂತಿವನೋ?" ಎಂದು ಅರ್ಥ ಹೇಳಿದರು. ನಿಜವಾಗಿ, ಅದೇ ದಿನ, ಆ ಗ್ರಾಮದ ಅಣ್ಣತಮ್ಮಂದಿರ ಒಂದು ಕಲಹದಲ್ಲಿ, ನರಸಪ್ಪಯ್ಯ ತಲೆಹಾಕಿ, ಆ ತಮ್ಮನಿಂದ ವ್ಯಾಜ್ಯಮಾಡಿಸಲಿಕ್ಕೆ ವಕೀಲರಿಂದ ರಿಜಿಸ್ತ್ರಿ ನೋಟೀಸು ಬಿಡಿಸಿದ್ದರು!

ಈ ಅರ್ಥ ಕೇಳುತ್ತಲೇ, ನರಸಪ್ಪಯ್ಯ ಸಿಟ್ಟಿನಿಂದ ಎದ್ದು ನಿಂತು, "ನಿಂ ಕೊಟ್ಟು ಖಂಕ್ಕೆ ಪ್ರೊನೋಟು ಬರೆಸಿ, ಇದ್ದವರ ಆಸ್ತಿ ಒಳಗೆ ಹಾಕುವ, ಇನ್ನೊಬ್ಬರ ಮನೆ ತೆಗೆಯುವ ಏವಾಲಿ! ನಿನ್ನ ಕಿವಿವಾಲೆ ತೆಗೆದು ಕೈಯಲ್ಲಿ ಕೊಡತ್ತೇನೆ. ನೋಡು, ನನ್ನ ಪರಾಕ್ರಮ!" ಎಂದು ಕೂಗುತ್ತ, ಎದುರಿಗಿದ್ದ ದಿವನ್ನು ಊದಿಬಿಟ್ಟರು.

ಗಲಭೆಯಾಯಿತು ಕತ್ತಲೇ ಪೆಟ್ಟಿನ ಶಬ್ದವೂ ಕೇಳಿತು. ಸಭೆಗೆ ವರು ಓಡಿಹೋದರು. ತಾಳವಮದ್ದಳೆ ಕಾಳಗದಲ್ಲಿ ಮುಗಿಯಿತು. ಮರ ಪ್ರಸಂಗವೇನೆಂದು ಕೇಳಿದವರಿ 'ರಾಣನಗಟ್ಟ ಕಾಳಗ' ಎಂದು ಬಂತು!

(ಇನೇ ಪುಟದ ಕಡುವರ್ತಿದುದು)

ಕೀಯಾಧಿಕಾರ ಬಿಟ್ಟುಕೊಡಲಾರೆವೆನುವುದಕ್ಕೊಂದು ನೆವನವಾಗಿ ಉಪಯೋಗಿಸಿಕೊಳ್ಳಬಹುದೆಂಬುದರ ಸೂಚನೆಯೇ ಇದು? ಹಾಗೆ ಮುಸ್ಲಿಮರನ್ನು ಹುರಿದುಂಬಿಸಲು ಹೂಡಿದ ಪ್ರಗಾಢವಾದ ಹಂಚಿಕೆಯೇ ಇದು? ಅಥವಾ ಬಲಗೈ ಕೊಟ್ಟುದನ್ನು ಎಡಗೈ ಕಸಿದುಕೊಳ್ಳುವ ರೀತಿಯಲ್ಲಿ ಅಧಿಕಾರವನ್ನು ಕೊಟ್ಟಂತೆ ಮಾಡುವ ಒಂದು ಪ್ರದರ್ಶನವೇ ಇದು?" ಎಂದು ಹಂಗಿಸಿರುತ್ತಾರೆ.

ನೀವು ಏಕೆ ಜೀವ ವಿಮೆ ಇಳಿಸಬೇಕು

ಇಂದೇ	ತಂದೆಯ ಹಂಬಲು	ನಾಳಿಗೆ
ವಿಮೆ	ಹೆಂಡತಿಯ ಬಾಧ್ಯತೆ	ಉಪ
ಇಳಿಸಿ	ಮಗುವಿನ ಹಕ್ಕು	ಭೋಗಿಸಿ
	ಕುಟುಂಬದ ಆನಂದ	

"ದಿ ಭಾರತಮಾತ"ದ ಸಕಾಲದ ಕರೆಯನ್ನು ಗಮನವಿಟ್ಟು ಕೇಳಿ; ಪೂರ್ಣ ಪ್ರಯೋಜನ ಹೊಂದಿಕೊಳ್ಳಿ. ಅವಳು ಭರವಸೆ ಕೊಡುತ್ತಾಳೆ. ಮಿತವ್ಯಯವು ಅದೃಷ್ಟವನ್ನು ಗಳುವುದು; ಸಂತತಿಗೆ ಉಳಿಸಿಕೊಡುವುದು.

ಮಿತವ್ಯಯ ಮಾಡಿ

The Bharatha Matha Provident Assurance Co. Ltd.,

TUTICORIN.

ದಿ ಭಾರತಮಾತಾ ಪ್ರೊವಿಡೆಂಟ್ ಎಶ್ಯೂರೆನ್ಸ್ ಕ.ಲಿ.

ಟು ಟಿ ಕೋ ರಿ ನ್.

— ಇದರಲ್ಲಿ ವಿಮೆ ಇಳಿಸಿ —

ಏಜಂಟರು ಬೇಕು—ಉದಾರ ಶರತ್ತುಗಳು. ತಲಬು ಮತ್ತು ಕಮಿಶನ್.

ಬರಕೊಳ್ಳಿ:— ಕೆ. ಜನಾರ್ಧನ ಕಲ್ಲೂರ್,

ಆರ್ಗನೈಜಿಂಗ್ ಆಫೀಸು, ಕೊಳದ ಪೇಟೆ, ಉಡುಪಿ, ದ. ಕ.

ವೇಪ್ರಿನ್ (Regd.)

ಚಿಕ್ಕ ಡಾಕ್ಟರ್, ಸ್ವದೇಶಿ ವಸ್ತು.

ಇದರ ಲೇಪನದಿಂದ ಗಜ್ಜಿ, ಫಾಯ, ವ್ರಣ, ಇಸಬು, ನಾರು ಹುಣ್ಣು, ಕರಪಾಣಿ, ಮೂಲವ್ಯಾಧಿ, ಮೆಟ್ಟಿನ ಫಾಯ, ಮುದ್ದಣ (Pimples), ಸುಟ್ಟ ಫಾಯ, ಕತ್ತಿಫಾಯ, ತೊಡವಾಳ, ಗಜಕರ್ಣ ಮಾಯವಾಗುವುವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇದಲ್ಲದೆ ಇಂದ್ರಜಾಲ ದೋಪಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತ ಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲಿ ಇದ್ದಲ್ಲಿ ಒಬ್ಬ ವೈದ್ಯರೇ ಇದ್ದಂತಾಗುವುದು. ಕ್ರಯ ಬಹು ಸುಲಭ.

ಔನ್ಸ್ ಬಾಟ್ಲು 1ಕ್ಕೆ 0—9—0; ½ ಔನ್ಸ್‌ಗೆ 0—5—0

ಎಲ್ಲಾ ಅಂಗಡಿಗಳಲ್ಲೂ ದೊರೆಯುವುದು

ಏಜಂಟರು:—**Basel Mission Press, Mangalore.**

ಉಡುಪಿ ಮಿಶನ್ ಷಾಪ್, ಸಂತೆಕಟ್ಟೆ, ಉಡುಪಿ.
ಭಕ್ತಾ & ಬ್ರದರ್ಸ್, ಕಾಸರಗೋಡು.
ಎ. ವಿ. ಶೆಣೈ, ಕಾರ್ಕಳ.
ಡಾ। ಶ್ರೀನಿವಾಸ ವೈ. ಪುತ್ತೂರು.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕೆಟ್ಟಾ ಕಳುಹಿಸಿ ಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ.

ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ

ಕಲ್ಮಂಜೆ ವ್ಯಾಸಾಚಾರ್ಯ,

ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.

...harya, Brass-ware Merchant, UDIPI, S. K.

ಮುಶ್ತರಿಕ್!

ಕೆಮ್ಮು ಮತ್ತು ಉಬ್ಬಸದ ಅತಿ ಸುಲಭ ನಿವಾರಣೆಯ ಬಗ್ಗೆ ಮುಶ್ತರಿಕನ್ನು ಅಗತ್ಯವಾಗಿ ಉಪಯೋಗಿಸಿರಿ.

ಮಂಗಳೂರಲ್ಲಿ ದೊರೆಯುವ ಸ್ಥಳಗಳು

೧. ಬಾಸೆಲ್ ಮಿಶ್ಶನ್ ಶಾಪ್, ೨. ಪುತ್ತು ವೈಕುಂಟ ಸೇಟ್, ೩. ಯು. ಆರ್. ಶೆಣ್ಯೈ ಎಂಡ್ ಸನ್ಸ್, ೪. ಕೆ. ಗಣಪ ಶೆಟ್ಟಿ, ಜನರಲ್ ಮರ್ಚಂಟ್, ಬಿಜೈ, ೫. ಸೆಂಟ್ರಲ್ ಸ್ಟೋರ್ಸ್.

ಸೀಸೆ 1ಕ್ಕೆ ಬೆಲೆ ಆರು ಆಣೆ ಮಾತ್ರ.

ಪ್ರೊಪ್ರೈಟರ್ಸ್— ಎ. ಯಸ್. ಗುರುಕಂಬಲ್ ಎಂಡ್ ಸನ್ಸ್,

ಮುಶ್ತರಿಕ್ ಫಾರ್ಮೇಸಿ, ಕಿನ್ನಿಕಂಬಳ ಪೋಸ್ಟ್, ದ: ಕ.

ವೆಂಕಟಗಿರಿ ಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಈ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ, ಮುದ್ದಾದ ಮುದ್ರಣ. ಬೆಲೆ ರೂಪ್ಯಾ ೧—೮—೦ ಟಪ್ಪಾಲು ಹಾಸಲು ಬೇರೆ. ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯದ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕರ್ತಾ ನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಎ. ವರದು...
ಜವುಳಿ ಅಂಗಡಿ,
ಇವ...
ಯಾವತ್ತು
ರವಂ ಸ...
ಶ್ರೀ ಧನಲ...
(ಪ್ರೊ:— ...
ಮಾರ್ಕೆಟ್ ...
ಇಲ್ಲಿ ಬಿಳಿ ಉತ್ತ...
ಒಮ್ಮೆ ಭ...

ನೋಟೀಸು

ತಾ. 2-3-1942ರಿಂ...
ನಾಡಿಯಲ್ಲಿರುವ ನಮ್ಮ ಬ...
ಸನ್ನು ಬೋಳಾರ ಮಾರಿಗ...
ಡಿನ ಮಾಳಿಗೆಗೆ ಬ...
ಮಹಾಜನರು ಬೋಳಾರ...
ಹೊಸ ಬ್ರಾಂಚು ಆಫೀಸ...
ವಾಟುಗಳನ್ನು ನಡೆಸಿ...
ಬೇಕಾಗಿ ಅಪೇಕ್ಷಿಸುತ್ತೇವೆ.

ದಿ ಅತ್ತೂರು...
ಬೈ... ...ಂಗಳೂರು

THE BANK OF MANGALORE LTD., MANG...

ANNOUNCEMENT

On & from 1st of February 194...

fixed deposits are accepted at the followi... attractive rates:—

For one year	4%
For two years or over	4½%

Interest Payable Quarterly

ಕೇಸ್ಪೋಫೀನ್

ಹರಳೆಣ್ಣೆ ಚಾಕ್‌ಲೇಟ್‌ಗಳು.

ಮಕ್ಕಳಿಗೂ ಹಾಗೂ ಜವ್ವನಿಗರಿಗೂ ಏಕಪ್ರಕಾರವಾಗಿ ಪೂರ್ಣ ನಿರುಪದ್ರವಿ, ಸಿಹಿ, ಆನಂದದಾಯಕ, ಪ್ರಯೋಜನಕಾರಿಯಾದ ಉತ್ತಮ ಚೇತನದಾಯಕ ಬೇಧಿ ಔಷಧಿ.

ಉದರಶೂಲೆಗೊಳಿಸದು ಮತ್ತು ಚಟಹಿಡಿಸದು. ಸೀಸೆಗಳಲ್ಲಿ 25, 50 ಮತ್ತು 100 ಚಾಕ್‌ಲೇಟುಗಳು, ಹಾಗೂ 2 ಬಿಲ್ಲೆಗಳ ಪ್ಯಾಕೇಟುಗಳು.

ಪ್ರತಿ ಒಂದಕ್ಕೆ ಒಂದಾಣೆ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ, ಸ್ಟೋರ್‌ಗಳಲ್ಲೂ ಸಿಗುತ್ತದೆ.

ಕೇಸ್ಪೋಫೀನ್ ಮೆನ್ಯುಫೇಕ್ಚರಿಂಗ್ ಕಂಪೆನಿ,

ಪಿ. ಒ. ಬಾಕ್ಸ್ ನಂಬ್ರ 88, ಕರಾಚಿ.

ಅಮೃತಾಂಜನ

ವೇದನೆ, ಉಳುಕು, ಕುತ್ತಿಗೆ ಭುಜ ಹಲ್ಲು
ನೋವು, ಘಾಯಗಳು, ಬಾತುಕೊಳ್ಳುವುದು,
ಮುಂತಾದ ಬೇನೆ, ಪಕ್ಷವಾತ, ಮೂಡಿಮೆ
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

(REGD.)

ಅಮೃತಾಂಜನ

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ,
ಪಿತ್ತಉಪದ್ರವ, ತಲೆಹುಣ್ಣು, ವ್ರಣ
ಮೊದಲಾದ ಎಲ್ಲಾ ಚರ್ಮವ್ಯಾಧಿ
ಗಳಿಗೂ ಉತ್ತಮ ಔಷಧ.

ಅಮೃತಾಂಜನ,
ಲಿಮಿಟೆಡ್

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

PIE-MONEY BANK, LTD.,
Maidan Road, Mangalore.

Undertakes all kinds of Banking Business.
Current account at 2½% per annum.
Savings Bank Deposits at 4½% per annum.
FIXED DEPOSITS.
Years 5%. 1 year 4½%. For 6 months 4%. 3 months 3½%.
Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public
Apply for particulars:— *K. R Guru, Managing Director.*

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗ ಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವ ವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿ ಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು.

ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಸೇಟೆ ಚೌಕ, ಬೆಂಗಳೂರು ಸಿಟಿ.
ಏಜಂಟ್ಸ್:—ಪಲ್ಕ್ ಎಂಡ್ ಸನ್ಸ್, ಮಂಗಳೂರು.

WAR OR NO WAR

Life & Family Must Carry on in Peace & Comfort.
Take a Policy now in the

"Bombay Life"

AND THUS MAKE
PROVISION FOR YOUR OLD AGE AND FAMILY.

To Insure or to Represent, take advantage of over 32 years experience in Life Insurance by consulting:

KOCHIKAR BROTHERS, LTD.,

CHIEF AGENTS FOR SOUTH INDIA—INCLUDING INDIAN STATES,

Bombay Life Assurance Co., Ltd.

OFFICES AT:—
Udipi, Mangalore, Calicut, Trivandrum, Madras, Bangalore City, & Bombay 4.

and Published by B. Vittal Rau at the Kanteerava Office, Maidan North Road, Mangalore
M. Baburaya Prabhu, B. A., at the Mangalore Press, Car Street, Mangalore